ಮಂಗಳವಾರ, ದಿನಾಂಕ : 29ನೇ ಜುಲೈ, 2003ರಂದು
ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 10.10 ಗಂಟೆಗೆ ಸಮಾವೇಶಗೊಂಡಿತು
ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ ಅವರು
ಪೀಠವನ್ನು ಅಲಂಕರಿಸಿದ್ದರು)

ಸಂತಾಪ ಸೂಚನೆ

ವಿಷಯ:- ಹಾಲಿ ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಸಿ.ಭೈರೇಗೌಡರ ನಿಧನ.

ಅಧ್ಯಕ್ಷರು:- ಬಹುಶ: ಅನೇಕ ಸದಸ್ಯರಿಗೆ ವಿಧಾನಸಭೆಯ ಹಾಲಿ ಸದಸ್ಯರಾದ ಶ್ರೀ ಸಿ.ಭೈರೇಗೌಡರು ನಿಧನರಾಗಿರುವುದು ಗೊತ್ತಿರಬಹುದೆಂದು ಕಾಣುತ್ತದೆ. ಅದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

ವಿಧಾನ ಸಭೆಯ ಹಾಲಿ ಸದಸ್ಯರಾದ ಹಾಗೂ ಮಾಜಿ ಸಚಿವರಾಗಿದ್ದ ಶ್ರೀ ಸಿ.ಭೈರೇಗೌಡರವರು ದಿನಾಂಕ:12ನೇ ಮೇ 1934ರಂದು ಚೌಡಹಳ್ಳಿಯಲ್ಲಿ ಜನಿಸಿದ್ದರು. ಶ್ರೀಯುತರು ಬಿ.ಎಸ್‌ಸಿ. ಪದವೀಧರರಾಗಿದ್ದು ವೃತ್ತಿಯಲ್ಲಿ ಕೃಷಿಕರು. ಕ್ರೀಡಾರಂಗದ ಬೆಳವಣಿಗೆಯಲ್ಲೂ ಸಹ ಆಸಕ್ತಿಯುಳ್ಳ ಶ್ರೀಯತರು ಅಥ್ಲೆಟಿಕ್ಸ್‌ಗೆ ಸಂಬಂಧಪಟ್ಟಂತೆ ಸಿಯೋಲ್ ಓಲಂಪಿಕ್ಸ್ ಗೇಮ್ಸ್, ಬೀಜಿಂಗ್ ಏಷಿಯನ್ ಗೇಮ್ಸ್ ಹಾಗೂ ಇಂಡೋನೇಷಿಯಾ, ಯೂರೋಪ್ ಮತ್ತು ಅಮೇರಿಕಾ ದೇಶಗಳಲ್ಲಿ ಪ್ರವಾಸ ಮಾಡಿರುತ್ತಾರೆ. ಶ್ರೀಯುತರು 5 ಹಾಗೂ 7 ರಿಂದ 11ನೇ ವಿಧಾನಸಭೇಯವರೆಗೆ ಸತತವಾಗಿ ಆರು ಸಲ ವೇಮಗಲ್ ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು ಶ್ರೀ ರಾಮಕೃಷ್ಣ ಹೆಗಡೆ, ಶ್ರೀ ಹೆಚ್.ಡಿ. ದೇವೇಗೌಡ ಹಾಗೂ ಶ್ರೀ ಜೆ.ಹೆಚ್. ಪಟೇಲ್ ಇವರ ಸಚಿವ ಸಂಪುಟಗಳಲ್ಲಿ ಮೀನುಗಾರಿಕೆ ಹಾಗೂ ಕೃಷಿ ಸಚಿವರಾಗಿ ಕಾರ್ಯನಿರ್ವಹಿಸಿರುತ್ತಾರೆ. ಶ್ರೀಯುತರು ರೈತರ ಸಮಸ್ಯೆಗಳ ಬಗ್ಗೆ ಸದಾ ಹೋರಾಡುತ್ತಿದ್ದ ಒಬ್ಬ ರಾಜ್ಯ ನಾಯಕರಾಗಿದ್ದರು. ಶ್ರೀಯುತರು ಈ ದಿನ ದಿನಾಂಕ: 29ನೇ ಜುಲೈ 2003ರ ಮಂಗಳವಾರದಂದು ಬೆಳಿಗ್ಗೆ ಮರಣ ಹೊಂದಿರುತ್ತಾರೆ ಎಂದು ತಿಳಿಸಲು ವಿಷಾದಿಸುತ್ತೇನೆ.

+ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು):- ಮಾನ್ಯ ಅಧ್ಯಕ್ಷರೆ, ನಮ್ಮೆಲ್ಲರಿಗೂ ಬಹಳ ದು:ಖವನ್ನು ಮತ್ತು ಸಂಕಟವನ್ನು ತಂದಿರತಕ್ಕಂಥ ಈ ಸುದ್ದಿ ನಂಬಲು ಸ್ವಲ್ಪ ಸಾಧ್ಯವಾಗದಿರುವಂಥ ಆಘಾತ! ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್‌ರವರು, ನಿನ್ನೆ ಅವರನ್ನು ಮೊಗಸಾಲೆಯಲ್ಲಿ ಕಂಡಿದ್ದೆ ಎಂದು ಈಗತಾನೇ ನನಗೆ ಹೇಳುತ್ತಿದ್ದರು. ನಿನ್ನೆ ವಿಧಾನಸಭೆಯಲ್ಲಿ ನಾನು ಇದ್ದಾಗ ಅವರನ್ನು ಕಂಡಂತೆ ಆಗಲಿಲ್ಲ. ಭೈರೇಗೌಡರು ಸಾರ್ವಜನಿಕ ಜೀವನದಲ್ಲಿ ಪರಿಶುದ್ಧತೆಯನ್ನು, ಪಾರದರ್ಶಕತೆಯನ್ನು ತಂದುಕೊಡಬೇಕೆಂದು ಅವಿರತವಾಗಿ ಪ್ರಯತ್ನ ಪಟ್ಟಂಥ ಒಬ್ಬ ನಾಯಕರಾಗಿದ್ದರು. ರೈತರು ಜ್ವಲಂತ ಸಮಸ್ಯೆಗಳಿಗೆ ಸ್ಪಂದಿಸತಕ್ಕದ್ದು, ಆ ಸಮಸ್ಯೆಗಳನ್ನೇ ಆಧಾರ ಮಾಡಿಕೊಂಡು ಹೋರಾಟ ಮಾಡತಕ್ಕದ್ದು, ಆ ಮೂಲಕ ಯಾವ ನೆಲೆಗಟ್ಟಿನಿಂದ ಅವರು ಎದ್ದು ಬಂದರೋ ಅದಕ್ಕೆ ತಮ್ಮನ್ನು ತಾವು ಪೂರ್ಣ ವಿನಿಯೋಗಿಸಿಕೊಂಡಿದ್ದರು ಎನ್ನತಕ್ಕದ್ದು ನಮ್ಮ ನೆನಪಿಗೆ ಥಟ್ಟನೆ ಬರತಕ್ಕ ಒಂದು ನೆನಪು. ಬಹಳ ವರ್ಷಗಳ ಕಾಲ ಅವರನ್ನು ನಾನು ವಿಧಾನ ಸಭೆಯ ಒಳಗೆ ನೋಡಿದ್ದೇನೆ. ನಾನು ಆ ಸ್ಥಾನದಲ್ಲಿ ಕೂರತಕ್ಕಂಥ ವಿಶೇಷ ಅವಕಾಶ ಸಿಕ್ಕಿದಾಗ ಅವರನ್ನು ವಿರೋಧಿ ಪಾಳಯದಲ್ಲಿ ನಾನು ನೋಡುತ್ತಿದ್ದೆ. ಅವರು ಬಹಳ pro-

active ಹೋರಾಟಗಾರರಾಗಿದ್ದರು. ಅವರು 1989, 1990, 1991, 1992 ಮತ್ತು 1993ನೇ ಇಸವಿಗಳಲ್ಲಿ ಹತ್ತು ಹಲವು ಹೋರಾಟಗಳನ್ನು ಮಾಡುತ್ತಿದ್ದರು, ಅವರಿಗೆ ಅಷ್ಟೊಂದು ವಯಸ್ಸಾಗಿದ್ದರೂ ಸಹ ಅದು ಅವರಲ್ಲಿ ಕಾಣುತ್ತಿರಲಿಲ್ಲ. ನಾನು ಅದನ್ನೇ ಯೋಚನೆ ಮಾಡುತ್ತಿದ್ದೆ, ಬಹುಶ: ಅವರಿಗೆ 55–60 ವರ್ಷಗಳಾಗಿರಬಹುದೆಂದು ನಾನು ಅಂದುಕೊಂಡಿದ್ದೆ. ಆದರೆ ನನ್ನ ಸಮಕಾಲೀನರು ಅನ್ನತಕ್ಕಂಥದ್ದನ್ನು ಮಾನ್ಯ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್‌ರವರು ನನ್ನ ಗಮನಕ್ಕೆ ತಂದರು. ಒಂದೊಂದು ಸಾರಿ ಇಂತಹ ಘಟನೆಗಳೂ ನಡೆದಂತಹ ಕಾಲದಲ್ಲಿ, ಕಾಶಪ್ಪನವರು ಇತ್ತೀಚೆಗೆ ತೀರಿಕೊಂಡರು, ಅವರನ್ನು ಹಿಂಬಾಲಿಸಿಯೇ ಇವತ್ತು ಮಾನ್ಯ ಭೈರೇಗೌಡರು ನಮ್ಮನ್ನು ಅಗಲಿ ಹೋಗಿದ್ದಾರೆ, ಕೆಲವೊಂದು ಸಾರಿ ನನಗನ್ನಿಸುತ್ತದೆ, ಏತಕ್ಕೋಸ್ಕರ ಈ ಹೋರಾಟವೆಲ್ಲವನ್ನೂ ನಾವು ಮಾಡುತ್ತೇವೆ ಎನ್ನಕ್ಕಂಥ ಒಂದು ಭಾವನೆ ನಮ್ಮಲ್ಲಿ ಬಂದಿದೆ. ಅವರು ಸೌಜನ್ಯಶೀಲರಾಗಿದ್ದರು. ಇಲ್ಲಿ ಎಷ್ಟೇ ಆರ್ಭಟಿಸಿದರೂ ಕೂಡ ಹೊರಗೆ ಹೋದಾಗ ಅವರ ಸೃಜನಶೀಲತೆ ಮತ್ತು ಸೌಜನ್ಯಶೀಲತೆಯನ್ನು ನಾವು ವಿಶೇಷವಾಗಿ ಕಾಣುತ್ತಿದ್ದೆವು. ಈಗ ಕಳೆದ 15 ದಿವಸಗಳ ಹಿಂದೆ ನನ್ನ ಇಲ್ಲಿಯ ಕೊಠಡಿಗೆ ಬಂದು ನನ್ನನ್ನು ಅವರು ಭೇಟಿ ಮಾಡಿದ್ದರು. ಅವರ ಕ್ಷೇತ್ರದ ಬಗ್ಗೆ ವಿಶೇಷ ಗಮನವನ್ನು ಅವರು ಈ ರಾಜ್ಯದ ಹಲವಾರು ಜವಾಬ್ದಾರಿಗಳನ್ನು ಹೊತ್ತಿದ್ದರೂ ಕೂಡ, ಒಂದು ರಾಜಕೀಯ ಪಕ್ಷದ ಮುಖ್ಯಸ್ಥರಾಗಿದ್ದರೂ ಕೂಡ, ತಮ್ಮ ಕ್ಷೇತ್ರದ ಬಗ್ಗೆ, ತಮ್ಮ ಜಿಲ್ಲೆಯ ಬಗ್ಗೆ ವಿಶೇಷವಾದಂತಹ ಕಾಳಜಿಯನ್ನು ಮಾನ್ಯ ಭೈರೇಗೌಡರು ಆಗ್ಗಿಂದಾಗ್ಗೆ ವ್ಯಕ್ತಪಡಿಸತಕ್ಕಂಥದ್ದಕ್ಕೆ ನಾವು ಮತ್ತು ನೀವು ಸಾಕ್ಷಿದಾರರಾಗಿದ್ದೇವೆ. ಕಬ್ಬು ಬೆಳೆಗಾರರ ಸಂಕಟವೇ ಆಗಲಿ, Tobacco ಬೆಳೆಗಾರರ ಸಂಕಟವೇ ಆಗಲಿ, ರೇಷ್ಮೆ ಬೆಳೆಗಾರರ ಸಂಕಟವೇ ಆಗಲಿ, ಭತ್ತ ಬೆಳೆಗಾರರ ಸಂಕಟವೇ ಆಗಲಿ, ಕಾವೇರಿ ವಿಚಾರವೇ ಆಗಲಿ, ಕೃಷ್ಣಾ ವಿಚಾರವೇ ಆಗಲಿ, ಎಲ್ಲಾ ವಿಚಾರಗಳಲ್ಲಿಯೂ ಕೂಡ ಒಂದು ಜೀವಂತವಾದಂತಹ ಇಂಟರೆಸ್ಟ್ live interest ಅನ್ನು ಪಡೆದು, ಅದರ ಬಗ್ಗೆ ತೀವ್ರತರವಾದಂತಹ application of mind... ನಮ್ಮಲ್ಲಿ application of mind ಯಾವುದಾದರೂ ಒಂದು subjectಗೆ ಕಡಿಮೆ ಆಗುತ್ತಿರತಕ್ಕಂಥ ಈ ದಿನಗಳಲ್ಲಿ ಭೈರೇಗೌಡರಲ್ಲಿ ನಾವು ಕಂಡಂತಹ ಒಂದು ವಿಶೇಷವಾದಂತಹ ಗುಣ ಏನೆಂದರೆ, full application of mind to the subject, ಯಾವುದನ್ನು ಅವರು ಚರ್ಚೆ ಮಾಡುತ್ತಾರೆ, ಯಾವುದನ್ನು ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ಪ್ರತಿಪಾದನೆ ಮಾಡುತ್ತಾರೋ, ಆ ಪ್ರತಿಪಾದನೆಯ ಉದ್ದಕ್ಕೂ ಕೂಡ ಅವರಲ್ಲಿ ಕಂಡದ್ದು ನಾವು ಈ ಸೂಕ್ಷ್ಮತೆಯನ್ನು. ಅವರು ಬಿ.ಎಸ್ಸಿ. ಪದವೀಧರರಾಗಿದ್ದರು, ವೃತ್ತಿಯಲ್ಲಿ ಕೃಷಿಕರಾಗಿದ್ದರು. ನನ್ನನ್ನು ಅವರು ಹಲವಾರು ಬಾರಿ ಭೇಟಿ ಮಾಡಿದಾಗಲೆಲ್ಲಾ ತಮ್ಮ ಕೃಷಿ ಜೀವನದಲ್ಲಿ ತಾವು ಎದುರಿಸುತ್ತಿರತಕ್ಕಂಥ ಸಮಸ್ಯೆಗಳು, ತಾವೇ ಇಷ್ಟೊಂದು ಪ್ರಮಾಣದ ಸಮಸ್ಯೆಗಳನ್ನು ಎದುರಿಸಬೇಕಾಗಿದ್ದರೆ, ಇನ್ನು ಸಾಧಾರಣವಾದಂತಹ ರೈತ ಈ ಸಮಸ್ಯೆಗಳ ತೂಕ, ಈ ಸಮಸ್ಯೆಗಳ ಭಾರಕ್ಕೆ ಹೇಗೆ ಬೀಗಿ ಹೋಗುತ್ತಿದ್ದಾನೆ, ಹೇಗೆ ಮರಿಗಿ ಹೋಗುತ್ತಿದ್ದಾನೆ ಅನ್ನತಕ್ಕಂಥ ಒಂದು ಜೀವಂತ ಚಿತ್ರವನ್ನು ನಮಗೆ ಕೊಡುತ್ತಿದ್ದರು. ಎಷ್ಟೋ ಸಾರಿ ಅವರನ್ನು ನೋಡಿದಾಗ ಮತ್ತು ಅವರ ಮಾತುಗಳನ್ನು ಕೇಳಿದಾಗ, ಆ ಸಮಸ್ಯೆಗಳೆಲ್ಲವೂ ಕೂಡ ಮಾತನಾಡುತ್ತಿರುವಂತೆ ನನಗೆ ಭಾಸವಾಗುತ್ತಿತ್ತು. ಕೆಲವೊಂದು ಸಾರಿ ನಾನು ಮತ್ತು ಅವರು ಇಲ್ಲಿ, ಈ ಸದನದಲ್ಲಿ ಅಭಿಪ್ರಾಯ ಭೇದಗಳಿಗೆ ರೂಪು ಕೊಟ್ಟಿದ್ದೇವೆ, ಕೆಲವೊಂದು ಸಾರಿ ಒಬ್ಬರನ್ನೊಬ್ಬರು ಚುಚ್ಚಲಿಕ್ಕೆ ಪ್ರಯತ್ನ ಪಟ್ಟಿದ್ದೇವೆ. ಆದರೆ ಇವು ಯಾವುವೂ ಕೂಡ ನಮ್ಮ ವ್ಯಕ್ತಿಗತವಾದಂತಹ ಸಂಬಂಧ ಅದರ ಮೇಲೆ ಯಾವ ಪ್ರತಿಕೂಲಕರವಾದಂಥ

ಛಾಯೆಯನ್ನು ಬಿಟ್ಟಿರಲಿಲ್ಲ ಅನ್ನತಕ್ಕಂಥದ್ದನ್ನು ನಾವು ಇಂದು ಸ್ಮರಿಸಿಕೊಳ್ಳಬೇಕಾಗಿದೆ. ನಾನು ವಿಧಾನ ಸಭಾ ಅಧ್ಯಕ್ಷನಾಗಿದ್ದಂತಹ ಕಾಲದಲ್ಲಿ ನಾನು ಅವರನ್ನು ಅಮೆರಿಕಾಕ್ಕೆ ಕಳುಹಿಸಿದ್ದೆ. ಅವರ ಒಂದು ಕಾಲಿನಲ್ಲಿ ನೋವು ಇದ್ದಿದ್ದರಿಂದ, ಅದಕ್ಕೆ All India Institute of Medical Sciencesಗೆ ಹೋದರು, ಅಲ್ಲಿ ಅವರಿಗೆ ಸಮಾಧಾನಕರವಾದಂತಹ ಶುಶ್ರೂಷೆ ಆಗಲಿಲ್ಲ, ಆದ್ದರಿಂದ ಅವರು ಅದಕ್ಕಾಗಿ ಅಮೆರಿಕಾಕ್ಕೆ ಹೋಗಬೇಕೆಂದು ಹೇಳಿದರು. ಆಗ ಇಲ್ಲಿಯ ನಮ್ಮ legislature department ನವರು, ಅವರನ್ನು ಅಮೆರಿಕಾಕ್ಕೆ ಏಕೆ ಕಳುಹಿಸಬೇಕು? ಇಲ್ಲೇ ಚಿಕಿತ್ಸೆ ಪಡೆಯಲಿಕ್ಕೆ ಸಾಧ್ಯವಿದೆಯಲ್ಲಾ! ಎಂದು ಬಹಳ ಕೊಕ್ಕೆಗಳನ್ನು ಹಾಕಿದ್ದರು. ಆದರೂ ನಾನು ಒಂದು ವಿಶೇಷವಾದಂತಹ ರಿಯಾಯಿತಿಯನ್ನು ಕೊಟ್ಟು ಅವರನ್ನು ಅಲ್ಲಿಗೆ ಕಳುಹಿಸಿಕೊಟ್ಟೆ. ಅವರ ತಮ್ಮ ಅಮೆರಿಕಾದಲ್ಲಿ ಇದ್ದರು. ನನ್ನ ತಮ್ಮ ಅಮೆರಿಕಾದಲ್ಲಿ ಇದ್ದಾನೆ, ಅವನು ಒಬ್ಬ ಡಾಕ್ಟರ್ ಅನ್ನು ಈಗಾಗೇ ಅಲ್ಲಿ ಗುರುತಿಸಿದ್ದಾನೆ. ಆ ಡಾಕ್ಟರ್ ನನ್ನನ್ನು ಕರೆದುಕೊಂಡು ಬನ್ನಿ ಎಂದು ಹೇಳಿದ್ದಾರೆ, ಆದ್ದರಿಂದ ನಾನು ಅಲ್ಲಿಗೆ ಹೋಗಬೇಕು, ಅಲ್ಲಿ ಶುಶ್ರೂಷೆ ಮಾಡಿಕೊಳ್ಳಬೇಕು, ನನ್ನ ಕಾಲು ಸರಿ ಹೋಗಬೇಕು, ನಾನು ಸಾರ್ವಜನಿಕ ಜೀವನದಲ್ಲಿ ಇನ್ನೂ ಹೆಚ್ಚು ಚುರುಕಾಗಿ ನಾನು ಓಡಾಡಬೇಕು ಅನ್ನತಕ್ಕಂಥ ಅಭಿಪ್ರಾಯ ಅವರಲ್ಲಿತ್ತು. ಆದರೆ ಅವರು ವಾಪಸ್ ಬಂದ ಮೇಲೆ ನಾನು 'ಏನಾಯಿತು?' ಎಂದು ಅವರನ್ನು ಕೇಳಿದೆ. ಅವರು ನನಗೆ ಏನು ಹೇಳಿದರು ಎಂದರೆ, 'ನನಗೊಂದು ಬೆತ್ತ ಕೊಟ್ಟರು, ಈ ಬೆತ್ತ ಕೊಟ್ಟರು, ಈ ಬೆತ್ತ ಉಪಯೋಗಿಸಿ, ಸರಿ ಹೋಗುತ್ತದೆ, ಇನ್ನೇನೂ ಮಾಡಲಿಕ್ಕೆ ಬರುವುದಿಲ್ಲ' ಎಂದು ಹೇಳಿದರು. ಇತ್ತೀಚಿನ ದಿವಸಗಳಲ್ಲಿ ಅವರು ಬೆತ್ತ ಹಿಡಿದುಕೊಂಡು ಓಡಾಡುತ್ತಿದ್ದರು. ಆದರೆ ಅವರು ಅದನ್ನು ಅಲ್ಲೇ ಬಿಟ್ಟು ಬರುತ್ತಿದ್ದರು. ಅವರಿಗೆ ಒಂದು ತರಹ ನಾಚಿಕೆ, ಏನು ಎಂದರೆ, ನಾನು ಬೆತ್ತ ಹಿಡಿದುಕೊಂಡು ಓಡಾಡಿದರೆ ಹೇಗೆ ಅಥವಾ ಮಾನ್ಯ ಅಧ್ಯಕ್ಷರು ಬೆತ್ತವನ್ನು ಒಳಗೆ ತರಬಾರದು ಎಂದು ಹೇಳಿ ಪ್ರತಿಬಂಧ ಮಾಡಿದ್ದರೋ ಏನೋ, ಆದ್ದರಿಂದ ಒಳಗೆ ಬೆತ್ತವನ್ನು ಮಾನ್ಯ ಬೈರೇಗೌಡರು ತರುತ್ತಿರಲಿಲ್ಲ. ನಾನು ಹಲವಾರು ಸಾರಿ ನೋಡಿದ್ದೇನೆ. ಅವರದ್ದು ದೊಡ್ಡ ಕುಟುಂಬವೇ ಇದೆ. ಕುಟುಂಬ ಅನ್ನತಕ್ಕಂಥದ್ದನ್ನು ನಾನು ಒಂದು ಸಂಕುಚಿತವಾದಂತಹ ಅರ್ಥದಲ್ಲಿ ಇವತ್ತು ವಿಶ್ಲೇಷಣೆ ಮಾಡುತ್ತಿಲ್ಲ. ದೊಡ್ಡ ಕುಟುಂಬ ಎಂದರೆ, ಇಡೀ ರೈತಾಪಿ ಜನ ಅವರ ದೊಡ್ಡ ಕುಟುಂಬ. ಇನ್ನೂ ಹೆಚ್ಚು ಮುಂದೆ ಹೋಗಿ ಹೇಳಬಹುದಾದರೆ, ಅವರಲ್ಲಿ ಈ ಸಾರ್ವಜನಿಕ ಜೀವನದಲ್ಲಿ ಯಾವ್ಯಾವ ಸೆಲೆಗಳಲ್ಲಿ ಅವರು ತಮ್ಮ ಆಸಕ್ತಿಯನ್ನು ಎಟುಕಿಸಿಕೊಂಡಿದ್ದರೋ, ಆ ಎಲ್ಲಾ ಭಾಗದಲ್ಲಿಯೂ ಕೂಡ ಅವರಿಗೆ followers ಇದ್ದರು, ಅಭಿಮಾನಿಗಳಿದ್ದರು, ಅವರನ್ನು ಹಿಂಬಾಲಿಸತಕ್ಕಂಥ ಜನ ಇದ್ದರು. ಮಾನ್ಯ ಅಧ್ಯಕ್ಷರೇ, ಅವರು ನಿಮ್ಮ ಊರಿನವರು. ಎಷ್ಟೋ ಸಾರಿ ಬಹಳ ಹಾಸ್ಯವಾಗಿ ನಮ್ಮ ಕೆಲವರು ಸಚಿವರುಗಳು ಮಾತನಾಡುತ್ತಿದ್ದರು. ನಿಮಗೆ ಎಷ್ಟು ಅವರ ಬಗ್ಗೆ ವಿಶ್ವಾಸ ಇತ್ತು ಎಂದರೆ, ಅವರು ಮತ್ತು ಮಾನ್ಯ ಶ್ರೀನಿವಾಸಗೌಡರಿಬ್ಬರೂ ಮಾತನಾಡದೇ ಹೋದರೆ ಯಾವ ಡಿಬೇಟೂ ಪರಿಪೂರ್ಣವಾಗುವುದಿಲ್ಲ ಅನ್ನತಕ್ಕಂಥ ಒಂದು ವ್ಯಾಖ್ಯಾನವನ್ನು ನಾನು ಬಹಳ ತಮಾಷೆಯಾಗಿ ಮಾಡುತ್ತಿದ್ದೆವು. ಏಕೆ ಎಂದರೆ, ಇಂತಹ ಮಾನವೀಕೃತವಾದಂತಹ ಸಂಬಂಧಗಳು ಆಗ್ಗಿಂದಾಗ್ಗೆ ಹುಟ್ಟಿ ಬರುತ್ತವೆ. ಅದನ್ನು ತಪ್ಪಿಸಲಿಕ್ಕೆ ಯಾರ ಕೈಯಲ್ಲೂ ಸಹ ಸಾಧ್ಯವಾಗುವುದಿಲ್ಲ. ಆದ್ದರಿಂದ ಮಾನ್ಯ ಭೈರೇಗೌಡರು ಒಂದು ಪರಿಚಿತವಾದಂತಹ ವ್ಯಕ್ತಿಯಾಗಿದ್ದರು. ಈ ಸದನ ಅಂತಹವರ ಹಠಾತ್ ನಿಧನದಿಂದ ಇವತ್ತು ಬಡವಾಗಿದೆ. ಸಾರ್ವಜನಿಕ ಜೀವನ ಇಂದು ಬಡವಾಗಿದೆ. ನಾವು ಉಳಿದಿರತಕ್ಕಂಥವರು, ಅವರು

ಬಿಟ್ಟು ಹೋದಂತಹ ಹತ್ತು ಹಲವಾರು ವಿಚಾರಗಳಲ್ಲಿ ನಮ್ಮನ್ನು ನಾವೇ ಅರ್ಪಿಸಿಕೊಂಡು, ಈ ರಾಜ್ಯದಲ್ಲಿ, ಈ ದೇಶದಲ್ಲಿ ರೈತಾಪಿ ಜನಗಳ ಬವಣೆಯನ್ನು ಆದಷ್ಟು ಕಡಿಮೆ ಮಾಡಲಿಕ್ಕೆ ನಾವು ನಮ್ಮ ಪ್ರಯತ್ನಗಳನ್ನು ತೀವ್ರ ರೀತಿಯಲ್ಲಿ ಮುಂದುವರೆಸಿದರೆ, ಶ್ರೀ ಬೈರೇಗೌಡರ ನೆನಪಿಗೆ ನಾವು ಕೊಡಬಹುದಾಗಿರತಕ್ಕಂಥ ಗೌರವ ಇದಾಗುತ್ತದೆ ಎಂದು ನಾನು ಭಾವಿಸುತ್ತಾ, ತಾವು ಮಂಡಿಸಿರತಕ್ಕಂಥ ಸಂತಾಪ ಸೂಚನೆ ನಿರ್ಣಯಕ್ಕೆ ನನ್ನ ಹೃತ್ಪೂರ್ವಕವಾದಂತಹ ಬೆಂಬಲವನ್ನು ವ್ಯಕ್ತಪಡಿಸಿ, ಅವರ ಬಂಧು, ಅಭಿಮಾನಿ ಮತ್ತು ಹಿಂಬಾಲಕ ವರ್ಗದವರೆಲ್ಲರಿಗೂ ಕೂಡ ಅವರ ಈ ಅಕಾಲಿಕ ನಿಧನವನ್ನು ಭರಿಸತಕ್ಕಂಥ ಶಕ್ತಿಯನ್ನು ಕೊಡಲಿ ಎಂದು ಪ್ರಾರ್ಥಿಸುತ್ತೇನೆ.

+ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಭೈರೇಗೌಡರು ಇವತ್ತು ತೀರಿ ಹೋದರು ಎಂದು ಬೆಳಿಗ್ಗೆ ಸುದ್ದಿ ಬಂದಾಗ ನಮಗೆ ನಂಬಲಿಕ್ಕೆ ಆಗಲಿಲ್ಲ. ಅದು ಆಘಾತಕಾರಿಯಾದ ಸುದ್ದಿ. ನಿನ್ನೆ ಮೊನ್ನೆ ನಮ್ಮ ಜೊತೆಯಲ್ಲಿ ಮಾತನಾಡಿಕೊಂಡು ಈ ಸದನದಲ್ಲಿ ಆಳವಾಗಿ ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿ ಚರ್ಚೆ ಮಾಡತಕ್ಕಂತಹ ವ್ಯಕ್ತಿ ಇವತ್ತು ನಮ್ಮ ಜೊತೆ ಇಲ್ಲವೆಂದು ಅದನ್ನು ನಾವು ಕಲ್ಪನೆ ಮಾಡಲಿಕ್ಕೆ ಕೂಡ ಸಹ ಸಾಧ್ಯವಾಗುತ್ತಿಲ್ಲ. ಈ ಸದನದಲ್ಲಿ ನಾನು ಶಾಸಕನಾಗಿ ಬಂದ ಮೇಲೆ ಹಲವಾರು ಸಂಸದೀಯ ಪಟುಗಳನ್ನು ಹಲವಾರು ಹಿರಿಯರ ಚರ್ಚೆಯನ್ನು ಅವರ ವಿಚಾರಗಳನ್ನೂ ನಾನು ಅನುಮೋದಿಸಿದ್ದೇನೆ. ಆದರೆ ಭೈರೇಗೌಡರು ಬಹಳ ಆಳವಾಗಿ ಅಭ್ಯಾಸ ಮಾಡಿದ್ದಂತಹ ವ್ಯಕ್ತಿ. ಯಾವುದೇ ವಿಷಯದ ಬಗ್ಗೆ ಅವರು ಮಾತನಾಡಲಿಕ್ಕೆ ನಿಂತರೆ ವಿಷಯದ ಆಳಕ್ಕೆ ಹೋಗುವಂತಹ ವ್ಯಕ್ತಿತ್ವ ಬೈರೇಗೌಡರದ್ದು. ಅದರಲ್ಲಿ ಕೃಷಿ ಇರಬಹುದು, ಗ್ರಾಮೀಣಾಭಿವೃದ್ಧಿ ಇರಬಹುದು, ಅವರು ಮಾತನಾಡಲಿಕ್ಕೆ ನಿಂತರೆ ಅವರ ಮುಂದೆ ಯಾರೂ ಸರಿ ಸಾಟಿ ಮಾಡಲಿಕ್ಕೆ ಸಾಧ್ಯವಿಲ್ಲ. ಆ ವಿಷಯಕ್ಕೆ ಅವರ ವ್ಯಕ್ತಿತ್ವ ಹೊಂದಿಕೊಂಡಿತ್ತು. ಅದಕ್ಕೆ ಬಹಳಷ್ಟು ಅಭ್ಯಾಸ ಮಾಡಬೇಕು, ಬಹಳಷ್ಟು ತಯಾರಿ ಮಾಡಬೇಕು, ಅದು ಏನೂ ಬೇಕಾಗಿರಲಿಲ್ಲ. ಈ ವಿಷಯಗಳ ಬಗ್ಗೆ ಭೈರೇಗೌಡರು ಪಾರ್ಟ್ ಅಂಡ್ ಪಾರ್ಸಲ್ ಆಗಿದ್ದರು. ಗಂಟೆ ಗಟ್ಟಲೆ ಅದರ ಬಗ್ಗೆ ಮಾತನಾಡುವುದು, ನಾನು ಹಿಂದೆ 1994–99ರಲ್ಲಿ ಶಾಸಕನಾಗಿದ್ದ ಸಂದರ್ಭದಲ್ಲಿ ಅವರು ಕೃಷಿ ಸಚಿವರು. ಇದೇ ಡಿಮಾಂಡ್ಸ್ ಮೇಲೆ ಮತ್ತು ಬೇರೆ ಬೇರೆ ವಿಷಯಗಳ ಮೇಲೆ ಚರ್ಚೆಯಾಯಿತು ಅವರು ಉತ್ತರ ಕೊಡುವ ಸಂದರ್ಭದಲ್ಲಿ ಈ ಕಡೆ ಕೂತ ಶಾಸಕರು ಏನು ಪ್ರಶ್ನೆಗಳನ್ನು, ಯಾವ ವಿಷಯಗಳನ್ನು ಎತ್ತಿದರೂ ಅದಕ್ಕೆ ಸ್ಪಷ್ಟೀಕರಣ ಕೊಡುವಂತಹ ಸಂದರ್ಭದಲ್ಲಿ ನಾವು ಏನು ಕೇಳಿದ್ದೇವೆ, ಅದಕ್ಕಿಂತ ಹೆಚ್ಚು ಸ್ಪಷ್ಟೀಕರಣ ಕೊಟ್ಟರು. ಅದು ಬಹುಶ: ರೆಕಾರ್ಡ್ ಇರಬಹುದು. ಏಳೆಂಟು ಗಂಟೆಗಳ ಕಾಲದವರೆಗೆ ಸತತವಾಗಿ ಅವರು ತಮ್ಮ ಉತ್ತರವನ್ನು ಕೊಟ್ಟರು. ಬಹುಶ: ಸದನದ ಇತಿಹಾಸದಲ್ಲಿ ಆ ರೆಕಾರ್ಡ್ ಇರಬಹುದು ಎಂಬುದು ನನ್ನ ಅನಿಸಿಕೆ. ಆ ರೀತಿ ಆಳವಾಗಿ ಹಲವಾರು ವಿಷಯಗಳ ಬಗ್ಗೆ ಸ್ಪಷ್ಟೀಕರಣ ಮಾಡಿದರು. ಕೃಷಿ ಇಲಾಖೆ ಬಗ್ಗೆ, ಗ್ರಾಮೀಣಾಭಿವೃದ್ಧಿ ಇಲಾಖೆ ಬಗ್ಗೆ ಸ್ಪಷ್ಟೀಕರಣ ಮಾಡಿದರು ಮತ್ತು ಕನ್‌ವಿನ್ಸ್ ಆಗುವ ರೀತಿಯಲ್ಲಿ ಅವರು ಉತ್ತರವನ್ನು ಕೊಟ್ಟಿದ್ದನ್ನು ನಾನು ನೋಡಿದ್ದೇನೆ. ಹಾಗಾಗಿ ಅಂತಹ ವ್ಯಕ್ತಿ ಇವತ್ತಿನ ರಾಜಕೀಯ ವ್ಯವಸ್ಥೆಯಲ್ಲಿ ಸಿಗಲಿಕ್ಕೆ ಸಾಧ್ಯವಿಲ್ಲ. ಅಂತಹ ವ್ಯಕ್ತಿತ್ವ ಬೈರೇಗೌಡರದು. ಪಾರದರ್ಶಕ ಹಾಗೂ ನೇರವಾಗಿ ಮಾತನಾಡುವುದು ಅವರ ವ್ಯಕ್ತಿತ್ವ. ಇದು ನೇರವಾದ ಮತ್ತು ನಿಷ್ಠುರವಾದ ರಾಜಕಾರಣಿಗಳ ಅಪರೂಪದ ಗುಣ. ನೇರ ಮತ್ತು ನಿಷ್ಠುರವಾದಿ. ಏಕೆಂದರೆ, ಈ ನಿಷ್ಠುರವಾದಿ ಮತ್ತು ನೇರವಾದ ಮಾತು ಇದ್ದುದ್ದರಿಂದ ರಾಜಕೀಯ ವ್ಯವಸ್ಥೆಯಲ್ಲಿ ಬಹಳಷ್ಟು ಮಂತ್ರಿಗಳನ್ನು ನಾವು ಶತ್ರುಗಳನ್ನಾಗಿ

ಮಾಡಿಕೊಳ್ಳಬೇಕಾಗಿದೆ. ಆದರೆ ಅವರು ಯಾವುದಕ್ಕೂ ಹೆದರುತ್ತಿರಲಿಲ್ಲ. ತಮ್ಮ ಮನಸ್ಸಿಗೆ ಏನು ಬರುತ್ತದೆ ಅದನ್ನು ಹೇಳುವುದು ಮತ್ತು ನಿಷ್ಠುರವಾದ ಮಾತನಾಡುವುದು ಅದು ಅವರ ಬಹುಮುಖ ವ್ಯಕ್ತಿತ್ವದಲ್ಲಿ ಅದು ಬಹು ಪ್ರಮುಖ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅಂತಹ ಒಬ್ಬ ವ್ಯಕ್ತಿ ಇವತ್ತು ರಾಜಕೀಯದಲ್ಲಿ ಇದ್ದ ವ್ಯಕ್ತಿಗಳ ಬಗ್ಗೆ ನಾವು ನೋಡುತ್ತೇವೆ. ಮೌಲ್ಯಗಳ ಬಗ್ಗೆ ಸಾಕಷ್ಟು ಜನ ಮಾತನಾಡುತ್ತಾರೆ. ಪ್ರಾಮಾಣಿಕತನದ ಬಗ್ಗೆ ಸಾಕಷ್ಟು ಜನ ಮಾತನಾಡುತ್ತಾರೆ. ಮತ್ತು ಪಾರದರ್ಶಕತೆ ಬಗ್ಗೆ ಮಾತನಾಡುತ್ತಾರೆ. ಆದರೆ ನಿಜವಾಗಿ ಒಂದು ಆದರ್ಶದ ಗುಣಗಳನ್ನು ಇಟ್ಟುಕೊಂಡ ಪ್ರಾಮಾಣಿಕವಾದ ರಾಜಕಾರಣ ಮಾಡಿದ ವ್ಯಕ್ತಿ ಭೈರೇಗೌಡರು ಎಂದು ನಾನು ಹೇಳಬಯಸುತ್ತೇನೆ. ಕೆಲವು ತಿಂಗಳ ಹಿಂದೆ ನಾವು ಶಂಕರಮೂರ್ತಿಯವರು ಬೇರೆ ಯಾವುದೋ ಕೆಲಸಕ್ಕೆ ಅವರ ಮನೆಗೆ ಹೋಗಿದ್ದೆವು. ಬೆಳಗಿನ ಉಪಹಾರಕ್ಕೆ ಅವರು ನಮಗೆ ಕರೆದಿದ್ದರು. ಅವರ ಮನೆಗೆ ಹೋದಾಗ ಆ ಮನೆಯಲ್ಲಿ ಇದ್ದ ವಾತಾವರಣ ನೋಡಿದರೆ ಭೈರೇಗೌಡರು ಒಬ್ಬರು ಮಂತ್ರಿ ಇದ್ದರಾ ಎಂದು ಅನ್ನಿಸುತ್ತದೆ. ಇಷ್ಟು ವರ್ಷಗಳ ರಾಜಕಾರಣದಲ್ಲಿ ಇದ್ದರೂ ಅಂತಹ ಒಬ್ಬ ವ್ಯಕ್ತಿ ಈ ರೀತಿ ಸಣ್ಣ ಮನೆಯಲ್ಲಿ ಮತ್ತು ಸರಳವಾದ ವ್ಯವಸ್ಥೆಯಲ್ಲಿ ಆ ಮನೆಯಲ್ಲಿರುವುದು ನೋಡಿದರೆ ನಮ್ಮ ಕಲ್ಪನೆಯಲ್ಲಿ ಊಹೆಗೂ ನಿಲ್ಲಲಿಕ್ಕೆ ಆಗಲಿಲ್ಲ. ಇಂತಹವರೂ ರಾಜಕಾರಣದಲ್ಲಿ ಇದ್ದಾರೆಯೇ ಎಂದು ನನಗೆ ಅನ್ನಿಸಿತು. ಇಂತಹವರು ಇರಲಿಕ್ಕೆ ಸಾಧ್ಯವಿಲ್ಲ ಎಂದು ನಮಗೆ ಅನ್ನಿಸಿದ್ದು. ಆದರೆ ಇಷ್ಟು ಸರಳವಾದ ಪ್ರಾಮಾಣಿಕವಾದ ವ್ಯಕ್ತಿ ರಾಜಕೀಯದಲ್ಲಿ ಇರಲಿಕ್ಕೆ ಸಾಧ್ಯ ಎಂದು ಭೈರೇಗೌಡರಿಂದ ನಾನು ತಿಳಿದುಕೊಂಡಿದ್ದೇನೆ. ಅವರ ಕುಟುಂಬ ವರ್ಗದವರು ಉಪಹಾರ ನೀಡಿದವರು. ಅವರ ಮನೆಯಲ್ಲಿ ಅವರ ಹೆಣ್ಣು ಮಕ್ಕಳು ಬಹುಶ: ಎಲ್ಲಿಯೂ ನಾವು ನೋಡುವುದಿಲ್ಲ. ಆಳು ಮತ್ತು ಯಾರಾದರೂ ಒಬ್ಬರು ಸರ್ವ್ ಮಾಡುತ್ತಾರೆ. ಆಳುಗಳ ವ್ಯವಸ್ಥೆ ಆ ಮನೆಯಲ್ಲಿರಲಿಲ್ಲ. ಇತ್ತೀಚೆಗೆ ಅವರ ಮನೆಯಲ್ಲಿ ಒಂದು ಮದುವೆಯಾಯಿತು. ನಾವು ರಾಜಕಾರಿಣಿಗಳು ಯಾವ ರೀತಿ ಮದುವೆ ಮಾಡುತ್ತೇವೆಂದು ನೋಡುತ್ತಿದ್ದೇವೆ. ಡಾಂಡೂಂ ಆಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಮದುವೆ ಮಾಡುತ್ತೇವೆ. ಭೈರೇಗೌಡರು ಮಗಳ ಮದುವೆ ಮಾಡಿದರೆ ಅಕ್ಕಪಕ್ಕದಲ್ಲಿ ಕೂತಿರುವ ನಮಗೆ ಕೂಡ ಗೊತ್ತಿರಲಿಲ್ಲ. ಯಾರಿಗೂ ಅವರು ಇನ್‌ವಿಟೇಷನ್ ಕೊಟ್ಟಿರಲಿಲ್ಲ. ಕೇವಲ ತಮ್ಮ ಕುಟುಂಬ ವರ್ಗದವರು, ತಮ್ಮ ಸಂಬಂಧಿಕರು ಮಾತ್ರ ಆ ಮದುವೆಗೆ ಆಮಂತ್ರಣ. ಕೇವಲ ನೂರಾರು ಜನರ ಮಧ್ಯೆ ಆ ಮದುವೆ. ಪತ್ರಿಕೆಗಳ ಮುಖಾಂತರ ನಮಗೆ ಅವರ ಮಗಳ ಮದುವೆಯಾಯಿತು ಎಂಬುದು ಗೊತ್ತಾಯಿತು. ಮೌಲ್ಯಗಳ ಬಗ್ಗೆ ಮಾತನಾಡುವ ರಾಜಕಾರಣ ನಿಜವಾಗಿ ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿರುವ ಅಪರೂಪದ ರಾಜಕಾರಣಿ ಭೈರೇಗೌಡರು ಎಂದು ನಾನು ಹೇಳಬೇಕಾಗುತ್ತದೆ. ಇವತ್ತು ಭೈರೇಗೌಡರು ನಮ್ಮ ಜೊತೆ ಇಲ್ಲ. ಅವರ ಆದರ್ಶ ಹಾಗೂ ಅವರ ಮೌಲ್ಯಗಳು ಇವತ್ತು ನಮ್ಮ ಮುಂದಿವೆ. ಅವರ ಆಳವಾದ ಅಭ್ಯಾಸ ಯಾವುದೇ ವಿಷಯದ ಬಗ್ಗೆ ಏನಾದರೂ ಹೇಳಬೇಕೆಂದರೆ, ಅದನ್ನು ಹೇಳುವ ಗುಣ ಏನಿದೆ ಅದನ್ನು ನಾವು ರಾಜಕಾರಣಿಗಳು ಕಲಿತುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇತ್ತೀಚಿನ ದಿನಗಳಲ್ಲಿ ಅವರಲ್ಲಿ ಏನೋ ಕೊರತೆ ಕಂಡುಬಂದಿದೆ. ಸದನದಲ್ಲಿ ಅವರು ಯಾವಾಗಲೂ ಸ್ಫೂರ್ತಿಯಿಂದ ಕೂತು ಕೆಲಸ ಮಾಡುವವರು, ಅವರು ತಡವಾಗಿ ಬಂದರೂ ಸಹಿತ ಏನೋ ಒಂದು ವಿಷಯದ ಬಗ್ಗೆ ಚರ್ಚೆ ನಡೆಯುತ್ತಿದ್ದರೂ ಏನೆಂದು ತಿಳಿದುಕೊಂಡು ತಕ್ಷಣವೇ ಅದಕ್ಕೆ ರೀಆ್ಯಕ್ಷನ್ ಕೊಡುವ ಪ್ರಕ್ರಿಯೆ, ತಕ್ಷಣ ಅದರಲ್ಲಿ ಇನ್‌ವಾಲ್ವ್ ಆಗುವುದು ಭೈರೇಗೌಡರ

ಗುಣ. ಇತ್ತೀಚಿನ ಎಂಟು–ಹತ್ತು ದಿವಸಗಳಲ್ಲಿ ನಾನು ನೋಡುತ್ತಿದ್ದೆ, ಏಕೋ ಸದನಕ್ಕೆ ಬರುವುದು ಸ್ವಲ್ಪ ಕಡಿಮೆಯಾಗಿತ್ತು. ಬುಧವಾರ, ಅಥವಾ ಗುರುವಾರ ಬಂದಾಗ ನಾನು ಮಾತನಾಡಿಸಿದೆ, ಸ್ವಲ್ಪ ಹೊತ್ತು ಕೂತು ಹೋದರು. ಹೋಗುವಾಗ ನಾನು ಕೇಳಿದೆ, ಬೈರೇಗೌಡರೇ ಇತ್ತೀಚಿನ ದಿವಸಗಳಲ್ಲಿ ಸದನಕ್ಕೆ ಬರುವುದು ಕಡಿಮೆ ಮಾಡಿದ್ದೀರಿ ಏಕೆ ಏನು ಎಂದು ಕೇಳಿದೆ. ನಿಮ್ಮಂತಹ ಹಿರಿಯರು ಇಲ್ಲಿ ಬರಬೇಕೆಂದು ಹೇಳಿದಾಗ, ಸ್ವಲ್ಪ ಮೈಯಲ್ಲಿ ಹುಷಾರಿಲ್ಲ, ವೈರಲ್ ಫೀವರ್ ಏನೋ ಬರುತ್ತಿದೆ, ಆಸ್ಪತ್ರೆಗೆ ಹೋಗಬೇಕಾಗಿದೆ, ಹೆಲ್ತ್‌ನಲ್ಲಿ ಅನ್ ಈಜಿನೆಸ್ ಇದೆ ಅದಕ್ಕೋಸ್ಕರ ನಾನು ತೋರಿಸುತ್ತಿದ್ದೇನೆ. ಇದಾದಮೇಲೆ ಬರುತ್ತೇನೆ, ಸದನ ಬಿಟ್ಟು ಹೋಗಲಿಕ್ಕೆ ನನಗೆ ಆಗುವುದಿಲ್ಲ. ಇಲ್ಲಿ ಇರುವ ವಿಷಯಗಳ ಚರ್ಚೆಯಲ್ಲಿ ಸತತವಾಗಿ ಭಾಗವಹಿಸಬೇಕು ಎನ್ನುವ ಮಾತು ಮತ್ತು ಯಾವುದೋ ಒಂದು ಕೊರಗು ಅವರಲ್ಲಿ ಕಾಣುತ್ತಿತ್ತು. ಯಾವುದು ಏನೆಂದು ನನಗೆ ಕಲ್ಪನೆ ಮಾಡಲಿಕ್ಕೆ ಸಾಧ್ಯವಿಲ್ಲ. ಈ ಒಂದು ವಾರದಲ್ಲಿ ಅವರಲ್ಲಿ ಮಾನಸಿಕವಾಗಿ ತುಮುಲ ನಡೆಯುತ್ತಿತ್ತು ಎನ್ನತಕ್ಕಂಥ ಭಾವನೆ ನನಗೆ ಮೂಡಿತು. ಈ ವಾರ ನೋಡಿದಾಗ ಆರೋಗ್ಯದಲ್ಲಿ ಏನೋ ಬದಲಾವಣೆಯಾಗಿತ್ತು ಅದನ್ನು ನಾವು ನೋಡಿದ್ದೇವೆ. ಅವರ ದಿನನಿತ್ಯದ ಚಟುವಟಿಕೆ ನೋಡಿದಾಗ ಒಬ್ಬ ಅತ್ಯಂತ ಆರೋಗ್ಯವಂತ ಮನುಷ್ಯ 68 ವರ್ಷ ವಯಸ್ಸಾಗಿದೆ ಎಂದರೆ ಅವರಿಗೆ 68 ವರ್ಷ ಎಂದು ನಂಬಲಿಕ್ಕೆ ಸಾಧ್ಯವಿಲ್ಲ. ಬಹುಶ: ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಪ್ರಕಾರ ಕೇವಲ 58 ರಿಂದ 60 ಸಮೀಪ ಇರಬಹುದು ಎಂದು ನಮ್ಮ ಕಲ್ಪನೆ ಇತ್ತು. ಅದೇ ರೀತಿಯ ಕಲ್ಪನೆ ನಮಗೂ ಇತ್ತು. ಈ ತಿಂಗಳಲ್ಲಿ ಪತ್ರಿಕೆಯಲ್ಲಿ ಅವರ ಬಗ್ಗೆ ಒಂದು ವಿಶೇಷವಾದ ಲೇಖನ ಬಂದಿತ್ತು. 69 ವರ್ಷದ ಹುಟ್ಟು ಹಬ್ಬದ ಆಚರಣೆ ಸಂದರ್ಭದಲ್ಲಿ ಅವರ ಬಗ್ಗೆ ಲೇಖನಗಳು ಬಂದಾಗ ಅವರಿಗೆ 68ವರ್ಷವೆಂದು ನಮಗೆ ಆಗ ಕಲ್ಪನೆಗೆ ಬಂದಿದ್ದು. ರಾಜಕೀಯ ವಾತಾವರಣದ ವ್ಯವಸ್ಥೆಯಲ್ಲಿದ್ದು ಅವರು ಅವರ ಆರೋಗ್ಯವನ್ನು ಕಾಪಾಡಿಕೊಂಡು ಬಂದಿದ್ದರು. ಸಡನ್ನಾಗಿ ಅವರು ಬೆಳಿಗ್ಗೆ ಹೃದಯಾಘಾತದಿಂದ ಅವರು ನಿಧನವಾಗುತ್ತಾರೆಂದು ಕಲ್ಪನೆ ಇರಲಿಲ್ಲ. ಇವತ್ತು ನಮ್ಮ ಮಧ್ಯೆ ಇಲ್ಲ. ಭೈರೇಗೌಡರು ಒಂದು ಆದರ್ಶ, ಪ್ರಾಮಾಣಿಕ ಮತ್ತು ಮೌಲ್ಯದ ರಾಜಕಾರಣ ಮಾಡಿದ್ದರು. ಏಕೆಂದರೆ ಅವರು ಕಮ್ಯುನಿಸ್ಟ್ ಚಳುವಳಿ ಮುಖಾಂತರ ಬಂದವರು. ಕಮ್ಯುನಿಸ್ಟ್ ಚಳುವಳಿ ಬಂತು ಸೋಷಿಯಲಿಸ್ಟ್ ಚಳುವಳಿಯಿಂದ ಬಂದಂತಹ ವ್ಯಕ್ತಿಗಳಲ್ಲಿ ಎಷ್ಟೋ ಬದಲಾವಣೆಗಳನ್ನು ನಾವು ನೋಡಿದ್ದೇವೆ. ಆದರೆ ಅವರು ಏನೂ ಬದಲಾವಣೆಯಾಗಲಿಲ್ಲ. ತಮ್ಮ ಬೇಸಿಕ್ ಪಾಲಿಸಿ ಏನಿತ್ತೋ ಅದರಲ್ಲಿ ಅವರು ಬದಲಾವಣೆಯಾಗಲಿಲ್ಲ. ಅವರು ಆ ವ್ಯಕ್ತಿತ್ವವನ್ನು ಈ ರಾಜ್ಯಕೀಯ ವ್ಯವಸ್ಥೆಯಲ್ಲಿ ಹಾಗೂ ಸಾರ್ವಜನಿಕ ಜೀವನದಲ್ಲಿ ಮುಂದುವರೆಸಿಕೊಂಡು ಬಂದ ಆದರ್ಶಗಳು ನಮಗೆಲ್ಲರಿಗೂ ಅನುಕರಣೀಯವಾದ ಆದರ್ಶ ಎಂದು ಈ ಸಂದರ್ಭದಲ್ಲಿ ಹೇಳಿ, ಭೈರೇಗೌಡರ ನಿಧನದಿಂದ ರಾಜಕೀಯ ವ್ಯವಸ್ಥೆ ಅಲ್ಲ ಇಡೀ ಸಾರ್ವಜನಿಕ ರಂಗವೇ ಬಡ ಆಗಿದೆ ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಭೈರೇಗೌಡರ ನಿದನದಿಂದ ಕೇವಲ ಅವರ ಕುಟುಂಬ ವರ್ಗಕ್ಕೆ ದು:ಖವಾಗಿಲ್ಲ, ಅವರ ಸಹಪಾಠಿಗಳಿಗೆ ಮತ್ತು ಇಡೀ ಸಾರ್ವಜನಿಕ ರಂಗಕ್ಕೆ ಮತ್ತು ರೈತಾಪಿ ಜನಗಳಿಗೆ ಬಹಳ ದೊಡ್ಡ ದು:ಖ ಮತ್ತು ಆಘಾತವಾಗಿದೆ ಎಂದು ಹೇಳಿ ಈ ಸಂದರ್ಭದಲ್ಲಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ಅವರ ಕುಟುಂಬ ವರ್ಗಕ್ಕೆ ಅಭಿಮಾನಿ ಬಂಧುಗಳಿಗೆ ಹಾಗು ಅವರ ಅಗಲಿಕೆಯಿಂದ ಏನು ದು:ಖವಾಗಿದೆ ಆ ದು:ಖವನ್ನು ಭರಿಸುವ ಶಕ್ತಿಯನ್ನು ದೇವರು ಕೊಡಲಿ ಎಂದು ಹೇಳಿ ನಾನು ನನ್ನ ಅನಿಸಿಕೆಯನ್ನು ವ್ಯಕ್ತಪಡಿಸಿ ತಾವು ಏನು ಇವತ್ತು ಸಂತಾಪ ಸೂಚನೆಯನ್ನು ಮಂಡನೆ ಮಾಡಿದ್ದೀರಿ, ಅದಕ್ಕೆ ಸಹಮತ ವ್ಯಕ್ತಪಡಿಸಿ

ನನ್ನ ಮಾತುಗಳನ್ನು ಮುಗಿಸುತ್ತೇನೆ.

10.40 ಎಎಂ

+ಶ್ರೀ ಬಿ. ಸೋಮೇಶೇಖರ್ (ಮಳವಳ್ಳಿ):- ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಭೈರೇಗೌಡರು ತೀರಿಕೊಂಡಿದ್ದಾರೆಂದು ಹೇಳಿದರೆ ನಾವ್ಯಾರು ನಂಬುವುದಕ್ಕೆ ಆಗುತ್ತಿಲ್ಲ. ನಿನ್ನೆ ಮಧ್ಯಾಹ್ನ ಲಾಂಜ್‌ಗೆ ಬಂದು ನಾನು ಮನೆಗೆ ಹೋಗುತ್ತಿದ್ದೇನೆ ಎಂದರು. ಇವೊತ್ತು ಬೆಳಿಗ್ಗೆ ನಾವು ಶಾಸಕಾಂಗ ಪಕ್ಷದ ಸಭೆಯನ್ನು ಕರೆದಿದ್ದೆವು. ಈ ಸಭೆಗೆ ಬರುವುದಕ್ಕೆ ಆಗುತ್ತದೋ ಅಥವಾ ಇಲ್ಲವೋ, ನಿವೇ ನಡೆಸಿಕೊಳ್ಳಿ ಎಂದು ನನಗೆ ಹೇಳಿದರು. ನಾನು ಆಗ ಅವರಿಗೆ ಹೇಳಿದೆ, ಆ ರೀತಿ ಬರದೇ ಇರಬೇಡಿ, ಆ ಸಭೆಗೆ ಬಂದು ಐದು ನಿಮಿಷಗಳ ಕಾಲ ಕುಳಿತು ನೀವು ಮನೆಗೆ ಹೋಗಿ, ಬೇಕಾದರೆ ನೀವು ವಿಧಾನಸಭೆಗೆ ಬರದೇ ಇದ್ದರೂ ಚಿಂತೆಯಿಲ್ಲ, ಎಂದು ಹೇಳಿ ಕೆಲವು ಮುಖ್ಯವಾದ ವಿಚಾರಗಳ ಬಗ್ಗೆ ಚರ್ಚೆ ಮಾಡಬೇಕಾಗಿದೆ ಎಂದು ಅವರಿಗೆ ನಾನು ಹೇಳಿದ್ದೆ. ಆದಕಾರಣ ಅವರು ಇವೊತ್ತಿನ ಸಭೆಗೆ ಬರಬೇಕು ಎಂದು ತೀರ್ಮಾನ ಮಾಡಿದ್ದರು. ಆದರೆ ಬೆಳಿಗ್ಗೆ 6.30ಕ್ಕೆ ಹಠಾತ್ ಹೃದಯಾಘಾತದಿಂದ ಭೈರೇಗೌಡರು ತೀರಿಕೊಂಡರು ಎಂದು ನನಗೆ ದೂರವಾಣಿ ಕರೆ ಬಂದಾಗ ತಿಳಿಯಿತು. ಪ್ರಥಮ ಬಾರಿಗೆ ಏಳೆಂಟು ದಿನಗಳ ಕಾಲ ಅವರು ಅಸ್ವಸ್ಥರಾಗಿದ್ದರು. ನಿನ್ನೆ ಮಾನ್ಯ ಶ್ರೀನಿವಾಸಗೌಡರು ಮತ್ತು ನಾವೆಲ್ಲಾ ಹೇಳುತ್ತಿದ್ದೆವು, ಅವರ ಜೀವನದಲ್ಲಿ ಎಂಟು ದಿನಗಳಿಗೂ ಹೆಚ್ಚು ಕಾಲ, ಜ್ವರ ಎಂದು ಬಿದ್ದಿರತಕ್ಕಂಥದ್ದು ಇದೇ ಪ್ರಥಮ ಬಾರಿಗೆ ಎಂದು ಹೇಳುತ್ತಿದ್ದೆವು. ಅವರು ಸುಮಾರು ಒಂದು ತಿಂಗಳಿನಿಂದೀಚೆಗೆ ಮಾನಸಿಕವಾಗಿ ಬಹಳ ನೊಂದಿದ್ದರು. ಏಕೋ ಕಾರಣ ಗೊತ್ತಿಲ್ಲ. ಕೆಲವು ರಾಜಕೀಯ ಬದಲಾವಣೆಗಳು ಇರಬಹುದು, ಬೆಳವಣಿಗೆಗಳು ಇರಬಹುದು. ಅದು ಅವರ ಮನಸ್ಸಿನ ಮೇಲೆ ಬಹಳ ಪರಿಣಾಮ ಬೀರಿತ್ತು ಎಂದು ನಾನು ತಿಳಿದುಕೊಂಡಿದ್ದೇನೆ. ಅವರು ಹೆಚ್ಚು ಹೇಳುತ್ತಿರಲಿಲ್ಲ, ಆದರೆ ಮನಸ್ಸಿನಲ್ಲಿ ಬಹಳ ನೊಂದುಕೊಳ್ಳುತ್ತಿದ್ದರು. ಅವರು ಕಮ್ಯುನಿಸ್ಟ್ ಪಕ್ಷದಿಂದ ಬಂದಂಥವರು. ಜೀವನದಲ್ಲಿ ಕೆಲವು ಮೌಲ್ಯಗಳನ್ನು ಅಳವಡಿಸಿ ಕೊಂಡಿದ್ದರು. ಬದ್ಧತೆ, ಸಾರ್ವಜನಿಕ ಜೀವನವನ್ನು ಸ್ವಚ್ಛ ಮಾಡಬೇಕೆಂದು ಹೇಳಿ ಹಗಲಿರುಳು ಯೋಚನೆ ಮಾಡುತ್ತಿದ್ದರು. ನಾವು ಸುಮಾರು ಇಪ್ಪತ್ತು, ಇಪ್ಪತ್ತೈದು ವರ್ಷಗಳಿಂದ ಒಂದೇ ಪಕ್ಷದಲ್ಲಿದ್ದರೂ ಕೂಡ ನನಗೂ ಅವರಿಗೂ ಬಹಳ ಆತ್ಮೀಯತೆ ಬೆಳೆದಿದ್ದು ಸುಮಾರು ನಾಲ್ಕೈದು ವರ್ಷಗಳ ಹಿಂದಿನಿಂದ. ನಾನು ಅವರಿಗೆ ಯಾವ ಕೆಲಸ ಹೇಳುತ್ತಿರಲಿಲ್ಲ, ಅವರೂ ನನಗೆ ಯಾವುದೇ ಕೆಲಸ ಹೇಳುತ್ತಿರಲಿಲ್ಲ. ಅಷ್ಟೊಂದು ದೂರ ದೂರ ಇದ್ದೆವು. ಆದರೆ ವಿಚಾರದಲ್ಲಿ ಮಾತ್ರ ಒಂದೇ ರೀತಿ ಇದ್ದೆವು. ನನ್ನ ಹತ್ತಿರ ಬಹಳಷ್ಟು ಸಾರಿ ಚರ್ಚೆ ಮಾಡುತ್ತಿದ್ದರು. ಎಷ್ಟೊಂದು ಕಲುಷಿತವಾಗಿದೆ ಈ ಸಾರ್ವಜನಿಕ ಜೀವನ, ಆಡಳಿತ ಹದಗೆಟ್ಟಿದೆ, ಏನು ಮಾಡಬೇಕು, ಯಾವ ರೀತಿಯಲ್ಲಿ ಸುಧಾರಣೆ ಮಾಡಬೇಕು ಎನ್ನತಕ್ಕಂಥದ್ದರ ಬಗ್ಗೆ ಬಹಳ ಯೋಚನೆ ಮಾಡುತ್ತಿದ್ದರು. ನನಗಂತೂ ವೈಯಕ್ತಿಕವಾಗಿ ಅವರ ನಿಧನದಿಂದ ಬಹಳ ನೋವಾಗಿದೆ. ನಮ್ಮ ಪಕ್ಷಕ್ಕೂ ಕೂಡ ಬಹಳ ನಷ್ಟವಾಗಿದೆ. ಅವರು ನಮ್ಮ ಪಕ್ಷದಲ್ಲಿ ಬಹಳ ಹಿರಿಯವರಾಗಿದ್ದರು. ಆರು ಬಾರಿ ಗೆದ್ದಿದ್ದರು. ಚುನಾವಣೆಯಲ್ಲೂ ಕೂಡ ಅವರು ಯಾವುದೇ ರೀತಿಯ ಅವ್ಯವಹಾರವನ್ನು ಮಾಡಿಲ್ಲ. ಸಾರ್ವಜನಿಕ ಜೀವನದಲ್ಲಿ ಕೆಲವು ಮೌಲ್ಯಗಳನ್ನು ಇಟ್ಟುಕೊಂಡು ಜನರ ಸಂಕರ್ಪಕಗಳನ್ನು ಇಟ್ಟುಕೊಂಡು ಜನರ ಪರ ಹೋರಾಟ ಮಾಡಿ ಚುನಾವಣೆಯಲ್ಲಿ ಗೆದ್ದು ಬರುತ್ತಿದ್ದರು. ಇನ್ನು ಅವರು ತಮ್ಮ ಖಾಸಗಿ ಜೀವನದಲ್ಲೂ ಕೂಡ ತಮ್ಮ ಬದ್ಧತೆಯನ್ನು ಬಿಟ್ಟುಕೊಡುತ್ತಿರಲಿಲ್ಲ. ಈಗ ತಾನೇ ಮಾತನಾಡಿದ ವಿರೋಧ ಪಕ್ಷದ

ನಾಯಕರು ಅವರ ಬಗ್ಗೆ ಚೆನ್ನಾಗಿ ತಿಳಿದುಕೊಂಡೇ ಸತ್ಯವಾದ ಮಾತುಗಳನ್ನು ಆಡಿದರು. ಮಾನ್ಯ ಭೈರೇಗೌಡರು ಸಾರ್ವಜನಿಕ ಸಮಾರಂಭವನ್ನು ಖಾಸಗಿಯಾಗಿ ಮತ್ತು ಖಾಸಗಿ ಸಮಾರಂಭವನ್ನು ಸಾರ್ವಜನಿಕವಾಗಿ ಎಂದೂ ಮಾಡಿದವರಲ್ಲ. ಮಾನ್ಯ ಭೈರೇಗೌಡರು ನಮ್ಮ ಪಕ್ಷದಲ್ಲಿ ಹಿರಿಯ ನಾಯಕರಾಗಿದ್ದರೂ ಕೂಡ ತಮ್ಮ ಇಬ್ಬರ ಮಕ್ಕಳ ಮದುವೆಗಳನ್ನು ನಮಗೂ ಗೊತ್ತಿಲ್ಲದೇ, ಯಾವುದೇ ಪಕ್ಷದ ಸಹೋದ್ಯೋಗಿಗಳಿಗೂ ಗೊತ್ತಿಲ್ಲದೇ ಅವರ ಕುಟುಂಬದವರೇ ಹತ್ತಾರೆ ಜನರು ಸೇರಿಕೊಂಡು ಮದುವೆಯನ್ನು ಮಾಡಿದ್ದಾರೆ. ಇಂಥ ಇವರ ಆದರ್ಶದ ಪಾಠವನ್ನು ನಾವೆಲ್ಲಾ ಕಲಿಯಬೇಕಾಗಿದೆ. ಮಾನ್ಯ ಭೈರೇಗೌಡರು ಮಂತ್ರಿಯಾಗಿ ಯಾವುದೇ ಖಾತೆಯನ್ನು ವಹಿಸಿಕೊಂಡರು ಎಂದರೆ ಆ ಇಲಾಖೆಯಲ್ಲಿಯೇ ಭಯ ಹುಟ್ಟುತ್ತಿತ್ತು. ಅಷ್ಟೊಂದು ದಕ್ಷತೆಯಿಂದ ಇಲಾಖೆಯನ್ನು ನಡೆಸುತ್ತಿದ್ದರು. ಮೊನ್ನೆ ಕೋಲಾರದಲ್ಲಿ ಭ್ರಷ್ಟಾಚಾರ ಮಾಡುತ್ತಾರೆ ಎಂದರೆ ಅಂಥವರ ಮೇಲೆ ಹೆಚ್ಚು ಸಿಟ್ಟು ಇಟ್ಟುಕೊಳ್ಳುತ್ತಿದ್ದರು. ಅವರು ಇಲಾಖೆಯಲ್ಲಿ ಮಂತ್ರಿಯಾಗಿದ್ದಾಗ ಅವರು ಅನೇಕ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಂಡಿದ್ದರು. ಹೀಗಾಗಿ ಇಲಾಖೆಯಲ್ಲಿ ಅವರು ಭಯವನ್ನು ಹುಟ್ಟಿಸಿದ್ದರು. ಶುದ್ಧವಾದಂಥ ಆಡಳಿತವನ್ನು ತರಬೇಕು ಎನ್ನುವ ದೃಷ್ಟಿಯನ್ನು ಅವರು ಹೊಂದಿದ್ದರು. ಅದೇ ರೀತಿ ಅವರು ಕೃಷಿ ಕ್ಷೇತ್ರದಲ್ಲಿ ಬಹಳ ಆಳವಾಗಿ ಅಧ್ಯಯನವನ್ನು ಮಾಡಿದ್ದರು. ಬಹುಶ: ಪಿ.ಹೆಚ್.ಡಿ. ಮಾಡಿದವರೂ ಕೂಡ ಇಷ್ಟೊಂದು ಜ್ಞಾನವನ್ನು ಹೊಂದಿರುವುದಿಲ್ಲವೇನೋ. ಆದರೆ ಭೈರೇಗೌಡರು ಅನೇಕ ಮ್ಯಾಗ್‌ಜೀನ್‌ಗಳನ್ನು ಓದುತ್ತಿದ್ದರು, ಅಂತರರಾಷ್ಟ್ರೀಯ ಮ್ಯಾಗಜೀನ್‌ಗಳನ್ನು ಓದುತ್ತಿದ್ದರು. ನಾವೇನಾದರೂ ಸಲಹೆ ಸೂಚನೆಗಳನ್ನು ಕೇಳಿದರೆ ಹೇಳುತ್ತಿದ್ದರು. ಯಾವ ರೀತಿಯಾಗಿ ವೈಜ್ಞಾನಿಕವಾಗಿ ವ್ಯವಸಾಯವನ್ನು ಮಾಡಬಹುದು ಎಂಬ ಬಗ್ಗೆ ಅವರು ಹೇಳುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಅವರು ತಮ್ಮ ಜಮೀನಿನಲ್ಲಿ ಆಧುನಿಕ ರೀತಿಯಲ್ಲಿ ವ್ಯವಸಾಯ ಮಾಡಬೇಕು ಎನ್ನುತ್ತಿದ್ದರು. ಈ ಮಧ್ಯೆ ನಮ್ಮ ಪಕ್ಷದ ಜವಾಬ್ದಾರಿಯನ್ನು ವಹಿಸಿಕೊಂಡ ಮೇಲೆ ಅದನ್ನು ಒಂದು ವರ್ಷದ ಮಟ್ಟಿಗೆ ನಾನು ತಡೆಹಿಡಿಯುತ್ತೇನೆ ಪಕ್ಷಕ್ಕೋಸ್ಕರ ನಾನು ದುಡಿಯುತ್ತೇನೆ ಎನ್ನತಕ್ಕಂಥ ನಿರ್ಧಾರವನ್ನು ಮಾಡಿದ್ದರು. ಆದರೆ ಇವೊತ್ತು ಅವರು ನಮ್ಮೊಂದಿಗೆ ಇಲ್ಲ. ನಮ್ಮ ಪಕ್ಷಕ್ಕೆ ಮಾತ್ರವಲ್ಲ, ಇಡೀ ಸಾರ್ವಜನಿಕ ಜೀವನದಲ್ಲಿ ಒಬ್ಬ ಆದರ್ಶ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಬಹಳ ವಿರಳ ಅಂಥವರು ಸಿಕ್ಕತಕ್ಕದ್ದು. ಯಾವತ್ತೂ ಅವರು ಅಧಿಕಾರಕ್ಕೋಸ್ಕರ ಎಲ್ಲಾ ದಾರಿಗಳನ್ನು ತುಳಿದವರಲ್ಲ, ಅವರು ಅವಕಾಶವಾದಿಗಳಾಗಿರಲಿಲ್ಲ. ಸರಿ ದಾರಿಯಲ್ಲಿ ಅವಕಾಶ ಬಂದರೆ ಮಾಡೋಣ, ಇಲ್ಲದಿದ್ದರೆ ಇರೋಣ ಎನ್ನತಕ್ಕಂಥ ನಿಸ್ವಾರ್ಥದ ಭಾವನೆ ಅವರಲ್ಲಿತ್ತು. ಅಂಥವರನ್ನು ನಾವು ಕಳೆದುಕೊಂಡಿರುವುದು ಬಹಳ ದು:ಖಕರವಾದ ಸಂಗತಿ. ಮಾನ್ಯ ವಿರೋಧ ಪಕ್ಷದ ನಾಯಕರು ಸ್ವಲ್ಪ ದಿನಗಳ ಜೊತೆ ಅವರೊಂದಿಗೆ ಇದ್ದರೂ ಅವರ ಬಗ್ಗೆ ಬಹಳ ಚೆನ್ನಾಗಿ ತಿಳಿದುಕೊಂಡು ಮಾತನಾಡಿದ್ದು ಬಹಳ ಸಂತೋಷವಾಯಿತು. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಸುಮಾರು 40, 45 ವರ್ಷಗಳ ಕಾಲದ ಅವರ ಜೊತೆಗಿನ ಅನುಭವವನ್ನು ಸದನದಲ್ಲಿ ಹಂಚಿಕೊಂಡಿದ್ದಾರೆ. ನಾನು ಕೂಡ ಮಾನ್ಯ ಸಭಾನಾಯಕರು ಮಂಡಿಸಿರತಕ್ಕಂಥ ಶ್ರದ್ಧಾಂಜಲಿ ಸೂಚನೆಗೆ ನಾನು ನಮ್ಮ ಪಕ್ಷದ ಪರವಾಗಿ ಮತ್ತು ವೈಯಕ್ತಿಕವಾಗಿ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಾ ಭಗವಂಥ ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲಿ ಮತ್ತು ಅವರ ನಿಧನದಿಂದ ನೊಂದಿರುವ ಅವರ ಕುಟುಂಬದವರಿಗೆ ಆಗಿರುವ ದು:ಖವನ್ನು ಭರಿಸತಕ್ಕಂಥ ಶಕ್ತಿಯನ್ನು ಕೊಡಲಿ. ಅವರ ಸಾರ್ವಜನಿಕ ಜೀವನ ನಮಗೆಲ್ಲರಿಗೂ ಆದರ್ಶವಾಗಲಿ ಎಂದು ಹೇಳಿ ನಾನು ಕೂಡ ಸಂತಾಪ ಸೂಚನಾ ನಿರ್ಣಯಕ್ಕೆ ಬೆಂಬಲವನ್ನು ಸೂಚಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ):- ಮಾನ್ಯ ಅಧ್ಯಕ್ಷರೆ, ಅರವತ್ತೊಂಭತ್ತನೆಯ ವಯಸ್ಸಿನಲ್ಲಿ ಮಾನ್ಯ ಭೈರೇಗೌಡರು ಹಠಾತ್ತಾಗಿ ತೀರಿಕೊಂಡಿರತಕ್ಕಂಥದ್ದು ನಮ್ಮೆಲ್ಲರಿಗೂ ಕೂಡ ಬಹಳ ನೋವನ್ನುಂಟುಮಾಡಿದೆ. 1974 ರಲ್ಲಿ ವಿರೋಧ ಪಕ್ಷದ ಸದಸ್ಯರಾಗಿ, ಮಾನ್ಯ ಕಾಗೋಡು ತಿಮ್ಮಪ್ಪನವರು, ಮಾನ್ಯ ಭೈರೇಗೌಡರು, ಇವರೆಲ್ಲರೂ ಇದ್ದಂಥ ಸನ್ನಿವೇಶದಲ್ಲಿ ಇವರ ಹೋರಾಟಗಳನ್ನು ನಾವು ಕೇಳಿದ್ದೆವು. ಮಾರ್ಕಿಸ್ಟ್ ಬಹಳ ಹತ್ತಿರವಿದ್ದಂಥ ಭೈರೇಗೌಡರು ಕಾಂಗ್ರೆಸ್ ಬಹಳ ತೀವ್ರವಾಗಿ ಅವೊತ್ತೂ ಸಹ ವಿರೋಧ ಮಾಡಿದರು. ಅವರು ಆಡಳಿತ ನಡೆಸಿದಂಥ ಸನ್ನಿವೇಶದಲ್ಲಿ ಪ್ರಾಮಾಣಿಕತೆಗೆ ಬಹಳ ಒತ್ತನ್ನು ಕೊಟ್ಟಂಥವರಾಗಿದ್ದರು. ನಮ್ಮಗೆಲ್ಲಾ ಗೊತ್ತಿದೆ, 1983 ರಲ್ಲಿ ಅವರು ಸ್ವತಂತ್ರ ಅಭ್ಯರ್ಥಿಯಾಗಿ ಈ ಮನೆಗೆ ಆರಿಸಿಬಂದರು. ಆ ಸಂದರ್ಭದಲ್ಲಿ ನಮ್ಮ ಸರ್ಕಾರವನ್ನು ತೆಗೆಯಲಿಕ್ಕೆ ಬಹಳ ಪ್ರಯತ್ನಗಳಾಯಿತು, ಮಾನ್ಯ ಹೆಗಡೆಯವರ ಸರ್ಕಾರ. ಅದನ್ನು ಉಳಿಸುವುದುಕ್ಕೆ ಮಾನ್ಯ ಭೈರೇಗೌಡರು ಮಾಡಿದಂಥ ಕೆಲಸವನ್ನು ನಾವ್ಯಾರೂ ಕೂಡ ಮರೆಯುವುದಕ್ಕೆ ಆಗುವುದಿಲ್ಲ. ಅದಕ್ಕೆ ಮುನ್ನ ಮಾನ್ಯ ಭೈರೇಗೌಡರು ಅವರಿಗೆ ಸ್ವತ: ಒಂದು ಕಾಲು ಸರಿ ಇಲ್ಲದೇ ಇದ್ದರೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಭೈರೇಗೌಡರು ಯಾವ ಕ್ರೀಡೆಯಲ್ಲೂ ಕೂಡ ಹಿಂದೆ ಬಿದ್ದವರಲ್ಲ. ರಾಜ್ಯದ ಸ್ಟೇಟ್ ಒಲಿಂಪಿಕ್ ಅಸೋಸಿಯೇಶನ್‌ನ ಅಧ್ಯಕ್ಷರಾಗಿ ಹತ್ತು ವರ್ಷಗಳ ಕಾಲ ರಾಜ್ಯದ, ರಾಷ್ಟ್ರ ಮಟ್ಟದ, ಅಂತರರಾಷ್ಟ್ರೀಯ ಮಟ್ಟದ ಕ್ರೀಡಾ ಕೂಟಗಳನ್ನು ನಡೆಸುವುದಕ್ಕೆ ಬಹಳ ಸ್ಫೂರ್ತಿಯನ್ನು ಕೊಟ್ಟು ಅದರ ನೇತಾರರಾಗಿದ್ದರು. ಅವರ ಬಹುಮುಖ ವ್ಯಕ್ತಿತ್ವದಲ್ಲಿ ಕ್ರೀಡಾ ಕ್ಷೇತ್ರವೂ ಕೂಡ ಒಂದಾಗಿದ್ದು ಗ್ರಾಮೀಣ ಪ್ರದೇಶದ ಮಕ್ಕಳಿಗೆ ಕ್ರೀಡೆಗೆ ಬಹಳ ಪ್ರೋತ್ಸಾಹವನ್ನು ಕೊಟ್ಟಂಥ ಒಬ್ಬ ಧೀಮಂತ ವ್ಯಕ್ತಿಯಾಗಿದ್ದರು. ಅವರು ಆಡಳಿತ ನಡೆಸತಕ್ಕಂಥ ಸಂದರ್ಭದಲ್ಲಿ ಭ್ರಷ್ಟ ಅಧಿಕಾರಿಗಳಿಗೆ ಸಿಂಹಸ್ವಪ್ನವಾಗಿದ್ದರು. ಕೆಲವು ಸಲ ಭೈರೇಗೌಡರ ಅತಿರೇಕವೇನೋ ಎಂದು ನಮ್ಮಲ್ಲಿ ಅನೇಕರಿಗೆ ಅನ್ನಿಸಿರತಕ್ಕಂಥದ್ದೂ ಉಂಟು. ಅವರಿಗೆ ಗ್ರಾಮೀಣ ಪ್ರದೇಶದ ಮಕ್ಕಳ ಬಗ್ಗೆ, ಜನಗಳ ಬಗ್ಗೆ, ರೈತರ ಬಗ್ಗೆ ಇದ್ದಂಥ ಒಂದು ಕಾಳಜಿ ಏನಿದೆ ಪ್ರಶ್ನಾತೀತವಾದಂಥದ್ದು. ನಾವೂ ಅವರೂ ಒಂದೇ ಮಂತ್ರಿಮಂಡಲಿದಲ್ಲಿದ್ದಂಥ ಸಂದರ್ಭದಲ್ಲಿ ಅನೇಕ ವಿದೇಶಗಳಿಗೆ ಹೋಗತಕ್ಕಂಥ ಅವಕಾಶ ಸಿಕ್ಕಿತ್ತು. ನಾವಿಬ್ಬರೂ ಜೊತೆಯಲ್ಲಿಯೇ ಹೋಗಿದ್ದೆವು. ಫಿಲಿಪೈನ್ಸ್, ಥೈಲೆಂಡ್, ಸಿಂಗಾಪೂರ್, ಮಲೇಶಿಯಾ, ಚೈನಾ, ಹೀಗೆ ಬೇಕಾದಷ್ಟು ಹೊರದೇಶಗಳಿಗೆ ನಾವು ಹೋಗಿದ್ದೆವು. ಮಾನ್ಯ ಸೋಮಶೇಖರ್‌ರವರು ಹೇಳಿದ ಹಾಗೆ ಬಹುಶ: ಕೃಷಿ ಕ್ಷೇತ್ರದಲ್ಲಿ ಮತ್ತು ಗ್ರಾಮೀಣ ಪ್ರದೇಶದಲ್ಲಿ ಅವರಿಗೆ ಎಕ್ಸ್‌ಪ್ರೆಶನ್ ಅನ್ನತಕ್ಕಂಥದ್ದು ಇರಲಿಲ್ಲ, ಸ್ವಲ್ಪ ಕಡಿಮೆ ಇತ್ತು. ಆದರೆ ಅವರಿಗೆ ಇದ್ದಂಥ ಆಳವಾದ ಜ್ಞಾನವೇನಿದೆ ಅದನ್ನು ನೋಡಿದರೆ ಈ ಕರ್ನಾಟಕದಲ್ಲಿಯೇ ಒಬ್ಬ ಕೃಷಿ ಪಂಡಿತರು ಮಾನ್ಯ ಭೈರೇಗೌಡರು ಎಂದು ಹೇಳಿದರೆ ಯಾವ ಕಾರಣಕ್ಕೂ ತಪ್ಪಾಗುವುದಿಲ್ಲ ಎಂದು ನಾನು ಹೇಳಬಯುತ್ತೇನೆ. ನಾವೆಲ್ಲಾ ವಿದೇಶ ಪ್ರವಾಸಕ್ಕೆ ಹೋದಂಥ ಸಂದರ್ಭದಲ್ಲಿ ಬಿ.ಎಸ್. ಪಾಟೀಲರು ನಮ್ಮ ಜೊತೆಗಿದ್ದರು. ಅವರು ಈಗ ಮುಖ್ಯ ಕಾರ್ಯದರ್ಶಿಗಳು. ನಾನು ಅವರಿಗೆ ಹೇಳುತ್ತಿರುತ್ತೇನೆ. ನೀನೊಬ್ಬ ವರ್ಕಿಂಗ್ ಮೆಶಿನ್ ಎಂದು ಹೇಳುತ್ತಿರುತ್ತೇನೆ. ರಾತ್ರಿ 11 ಗಂಟೆಯವರೆಗೂ ಡೆಲಿಗೇಶನ್‌ನ್ನು ಮೀಟ್ ಮಾಡುವುದು, ಆ ಮೀಟಿಂಗ್, ಈ ಮೀಟಿಂಗ್ ಎಂದು ಮಾಡಿಸುತ್ತಲೇ ಇದ್ದರು. ಬೆಳಗಿನ ಜಾವ 7 ಗಂಟೆಗೆ ಮತ್ತೆ ನೀವು ತಯಾರಾಗಿ ಇರಬೇಕು ಎಂದು ಬಿ.ಎಸ್. ಪಾಟೀಲ್‌ರವರು ನಮಗೆ ಹೇಳುತ್ತಿದ್ದರು. ಮಾನ್ಯ ಭೈರೇಗೌಡರು 5 ಗಂಟೆಗೆ ಏಳುತ್ತಿದ್ದರು. ಅದು ಕೌಲಾಲಂಪುರ್ ಇರಬಹುದು, ಮನಿಲಾ ಇರಬಹುದು, ಸಿಂಗಾಪೂರ್

ಇರಬಹುದು, ಬೆಳಿಗ್ಗೆ 5 ಗಂಟೆಗೆ ಎದ್ದು ಅಲ್ಲಿ ರೈತರು ಯಾವ ರೀತಿಯಾಗಿ ತರಕಾರಿಯನ್ನು ತಂದು ಮಾರುತ್ತಾರೆ, ಅಲ್ಲಿರತಕ್ಕಂಥ ಎ.ಪಿ.ಎಂ.ಸಿ. ಗಳು ಯಾವ ರೀತಿಯಾಗಿ ಕೆಲಸ ಮಾಡುತ್ತವೆ, ಅಲ್ಲಿ ಹೋಲ್‌ಸೇಲ್ ಮಾರ್ಕೆಟ್ ಹೇಗಿದೆ, ರೀಟೇಲ್‌ನವರು ಹೇಗೆ ತೆಗೆದುಕೊಂಡು ಹೋಗುತ್ತಾರೆ, ಅಲ್ಲಿಯ ತರಕಾರಿಗಳೇನು, ಅಲ್ಲಿಯೂ ಇಲ್ಲಿಯ ಹಾಗೆ ದಳ್ಳಾಳಿಗಳು ಇದ್ದಾರೆಯೇ, ಎಂದು ನೋಡಿ ತಿಳಿದುಕೊಳ್ಳುವುದರಲ್ಲಿ ಬಹಳ ದೊಡ್ಡ ಕಾಳಜಿಯನ್ನು ಅವರು ಇಟ್ಟುಕೊಂಡಿದ್ದರು. ನಾವು ಕಳೆದ ವರ್ಷ ಚೈನಾಗೆ ಹೋದಂತಹ ಸಂದರ್ಭದಲ್ಲಿ ಚೈನಾ ದೇಶದಲ್ಲಿ ಸಹ ರೇಷ್ಮೆ ತನ್ನದೇ ಆದಂತಹ ಸಮ್ಮಸ್ಯೆಗಳನ್ನು ಎದುರಿಸುತ್ತಿದೆ. ಅದನ್ನು ಅರ್ಥ ಮಾಡಿಕೊಂಡು ನೋಡಿ ಇಲ್ಲೂ ಸಹ ಸಮಸ್ಯೆಯನ್ನು ಎದುರಿಸುತ್ತಿದೆ, ನಾವು ನಮ್ಮ ಕಡೆ ವಿಶೇಷವಾಗಿ ರೇಷ್ಮೆ ಬೆಳೆಯತಕ್ಕಂಥ ರೈತರಿಗೆ ಏನೋ ಒಂದು ಅನಾಹುತ ಕಾದಿದೆ. ಇದಕ್ಕೆ ಏನದರೂ ಒಂದು ಹೊಸದು ಮಾಡಬೇಕು ಎನ್ನುವ ಕಾಳಜಿಯನ್ನು ಅವರು ಯಾವತ್ತೂ ಸಹ ವ್ಯಕ್ತ ಮಾಡುತ್ತಿದ್ದರು. ಮಾನ್ಯ ಭೈರೇಗೌಡರ ನಿಧನ ರೈತರ ಹೋರಾಟಕ್ಕೆ ಆಗಿರತಕ್ಕಂಥ ಒಂದು ನಷ್ಟವೆಂದು ನಾನು ತಿಳಿದುಕೊಂಡಿದ್ದೇನೆ. ನಾನು ಎಲ್ಲಾ ಸಂದರ್ಭದಲ್ಲಿ ಸಹ ಹಾಗೂ ನಮ್ಮ ಸಚಿವ ಸಂಪುಟದಲ್ಲಿ ಕೂಡ ಅವರ ಜೊತೆಯಲ್ಲಿ ಸಂಪೂರ್ಣವಾಗಿ ಕೆಲಸ ಮಾಡಿದ್ದೇನೆ. ಮಾನ್ಯ ಹೆಗಡೆಯವರು 1985ರಲ್ಲಿ ಇದ್ದಂತಹ ಸರ್ಕಾರದಲ್ಲಿ ಹಾಗೂ ಅದಾದನಂತರ ಶ್ರೀಮಾನ್ ದೇವೆಗೌಡರು, ಶ್ರೀಮಾನ್ ಜೆ.ಹೆಚ್.ಪಟೇಲ್ ಅವರು ಇದ್ದಂತಹ ಸರ್ಕಾರದಲ್ಲಿ ಸಹ ಅವರ ಜೊತೆ ಕೆಲಸ ಮಾಡಿದ್ದೇನೆ. ಗ್ರಾಮೀಣ ಕೃಪಾಂಕದ ಬಗ್ಗೆ ಮಾನ್ಯ ಎಸ್.ಎಸ್. ಪಾಟೇಲ್ ಅವರು ಮತ್ತು ಮಾನ್ಯ ಭೈರೇಗೌಡರು ಮಾಡಿದಂತಹ ಹೋರಾಟವನ್ನು ಯಾವತ್ತೂ ಸಹ ಮರೆಯುವುದಕ್ಕೆ ಆಗುವುದಿಲ್ಲ. ಅವರಿಗೆ Total concern and commitment ಈ ರೈತಾಪಿ ಜನಗಳ ಬಗ್ಗೆ ಇತ್ತು. ಕೇವಲ ಮೇಮಗಲ್ ಕ್ಷೇತ್ರಕ್ಕೆ ಮಾತ್ರ ಆಗಿರತಕ್ಕಂಥ ನಷ್ಟವಲ್ಲ, ಇದು ಕೋಲಾರ ಜಿಲ್ಲೆಗೆ ಆಗಿರತಕ್ಕಂಥ ನಷ್ಟವಲ್ಲ, ಕರ್ನಾಟಕ ರಾಜ್ಯದ ರೈತರ ಹೋರಾಟಕ್ಕೆ ಆಗಿರತಕ್ಕಂಥ ಒಂದು ನಷ್ಟವೆಂದು ನಾನು ತಿಳಿದು ಕೊಂಡಿದ್ದೇನೆ. ಸಾರ್ವಜನಿಕ ಜೀವನದಲ್ಲಿ ಇಂತಹ ಪ್ರಾಮಾಣಿಕ ವ್ಯಕ್ತಿಗಳನ್ನು ನೋಡುವುದು ಬಹಳ ಕಡಿಮೆ. ಮತ್ತು ವೈಯುಕ್ತಿಕವಾಗಿ ದ್ವೇಷ ಅಸೂಯೆಗಳನ್ನು ಅವರು ಜಾಸ್ತಿ ಇಟ್ಟುಕೊಳ್ಳುತ್ತಿರಲಿಲ್ಲ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಕಾಂಗ್ರೆಸ್‌ನಲ್ಲಿ ಇದ್ದಾರೆ. ಅವರು ಕಾಂಗ್ರೆಸ್‌ಗೆ ಹೋದರು. ಆದರೆ ಇವರು 1987ರಲ್ಲಿ ಜನತಾ ಪಾರ್ಟಿಯಲ್ಲಿಯೇ ಉಳಿದರು. ಆದರೆ ಅವರಿಬರಲ್ಲಿ ಇರತಕ್ಕಂಥ ಸ್ನೇಹ ಏನಿದೆ ಅದಕ್ಕೆ ಯಾವತ್ತೂ ಸಹ ಧಕ್ಕೆ ಬಂದಿರಲಿಲ್ಲ. ನಮ್ಮ ಜನತಾ ಪರಿವಾರದಲ್ಲಿ ಆಗಿರತಕ್ಕಂಥ ಕೆಲವು ಬದಲಾವಣೆಗಳು, ನಾನು, ಅವರು ಸೇರಿದಂಥ ಪಕ್ಷಕ್ಕೆ ಸೇರಲಿಲ್ಲ. ಆ ಸಂದರ್ಭದಲ್ಲಿ ಕಳೆದ ನಾಲ್ಕು ದಿನಗಳವರೆಗೆ ಸಹ ನಾವಿಬ್ಬರೂ ಜೊತೆಯಲ್ಲಿ ಕುಳಿತುಕೊಂಡು ಪ್ರತಿನಿತ್ಯವೂ ಸಹ ನಾಲ್ಕು ವರ್ಷಗಳ ಕಾಲ ನಿಮ್ಮ ಕೃಪೆಯಿಂದ ನಿಮ್ಮ ಆ್ಯಂಟಿ ಚೇಂಬರ್‌ನಲ್ಲಿ ನಾವು ಊಟ ಮಾಡುತ್ತಿದ್ದುದ್ದು ತಮಗೆ ಗೊತ್ತಿರತಕ್ಕಂಥ ವಿಚಾರ. ಹೀಗೆ ಒಬ್ಬ ಅತ್ಯಂತ ಸ್ನೇಹಮಯಿ ವ್ಯಕ್ತಿಯನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಇದರಿಂದ ನನಗೆ ಅನ್ನಿಸುವುದೇನೆಂದರೆ ನಮ್ಮ ರೈತರ ಹೋರಾಟಕ್ಕೆ ರೈತರ ಮಕ್ಕಳಿಗೆ ಇದೊಂದು ದೊಡ್ಡ ನಷ್ಟ, ಇಂತಹ ಹೋರಾಟಗಾರರ ಜೀವನ ಆ ಒಂದು ದೃಷ್ಟಿಯಲ್ಲಿ ಆದರ್ಶಮಯವಾಗಿರತಕ್ಕಂಥಾದ್ದು ಎಂದು ನಾನು ತಿಳಿದು ಕೊಂಡಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಸೋಮಶೇಖರ್ ಅವರು, ಅವರ ಬಗ್ಗೆ ಏನು ಭಾವನೆಗಳನ್ನು ವ್ಯಕ್ತ ಮಾಡಿದ್ದಾರೆ, ಅವರ ಪ್ರಾಮಾಣಿಕತೆ ಬಗ್ಗೆ, ಅವರಿಗೆ ಇದ್ದಂತಹ ಕಾಳಜಿ ಬಗ್ಗೆ ಇವೆಲ್ಲವೂ ಸಹ

ಮೆಚ್ಚತಕ್ಕಂಥಾದ್ದು ಎಂದು ಹೇಳಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಈ ಸಂದರ್ಭದಲ್ಲಿ ಒಂದು ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಭೈರೇಗೌಡರು ನೆನಪಿನಲ್ಲಿ ಬಹಳ ಕಾಲ ಉಳಿಯುತ್ತಾರೆ. ಏಕೆಂದರೆ ಮಾನ್ಯ ಭೈರೇಗೌಡರು ಬಯಲುಸೀಮೆ ಪ್ರದೇಶಾಭಿವೃದ್ಧಿ ಬಗ್ಗೆ ಬಹಳ ಕಾಳಜಿಯನ್ನು ಇಟ್ಟುಕೊಂಡಿದ್ದರು. ನಾನು ಮೊನ್ನೆ ಭೈರೇಗೌಡರಿಗೆ ಒಂದು ತಮಾಷೆ ಮಾಡಿದೆ, ಅದೇನೆಂದರೆ ವರ್ಲ್ಡ್ ಬ್ಯಾಂಕ್‌ನಿಂದ ಒಂದು ಸಾವಿರ ಕೋಟಿ ರೂಪಾಯಿ ಸಾಲವನ್ನು ಮಾನ್ಯ ಮುಖ್ಯಮಂತ್ರಿಗಳು ತಂದಿದ್ದಾರೆ, ಅದರಲ್ಲಿ 500 ಕೋಟಿ ರೂಪಾಯಿ ನಿಮ್ಮ ಕೋಲಾರ ಜಿಲ್ಲೆಗೆ ಕೊಟ್ಟಿದ್ದಾರೆ, ಆದರೂ ಕೂಡ ನಿಮಗೆ ತೃಪ್ತಿ ಇಲ್ಲವೆಂದು ಹೇಳಿದಾಗ, ಸಿಂಧ್ಯರವರೇ, ಇದೆಲ್ಲಾ ಸರಿ, ಹೂಳು ಎತ್ತಿ ಹಾಕುತ್ತೇವೆ, ಎಲ್ಲಾ ಕೆಲಸ ಮಾಡುತ್ತೇವೆ ಆದರೆ ಕಳೆದ ಹತ್ತು ವರ್ಷಗಳಲ್ಲಿ ಎಷ್ಟು ಕೆರೆಗಳಲ್ಲಿ ಕೋಡಿ ಹೋಗಿದೆ ಹೇಳಪ್ಪ ಎನ್ನುವಂತಹ ಮಾತನ್ನು ಹೇಳಿದರು. ಎಂದರೆ ಅವರಿಗೆ ಕನ್‌ಸರ್ನ್ ಇತ್ತು ಎನ್ನುವುರದ ಬಗ್ಗೆ ಅದೊಂದು ಧ್ಯೋತಕ. ಅದಕ್ಕೆ ಮಾನ್ಯ ಮುಖ್ಯಂತ್ರಿಗಳಿಗೆ ಹಾಗೂ ಸರ್ಕಾರಕ್ಕೆ ನಾನು ಸಲಹೆ ಮಾಡುವುದೇನೆಂದರೆ ಅವರಿಗೆ ರಾಗಿ ಬೆಳೆ ಬಗ್ಗೆ ಬಹಳ ಆಸಕ್ತಿ ಇತ್ತು. ಏಕೆಂದರೆ ಅವರು ಬೆಳೇಯುತ್ತಿದ್ದುದ್ದೇ ರಾಗಿ. ಅವರು ಬಹಳ ದೊಡ್ಡ ಕುಟುಂಬದಿಂದ ಬಂದತಹವರು. ಇತ್ತೀಚೆಗೆ ಅವರು ಅವರ ತಯಿಯನ್ನೂ ಸಹ ಕಳೆದುಕೊಂಡಿದ್ದರು. ಅವರ ಬಹಳ ದೊಡ್ಡ ಶಕ್ತಿ ಎಂದರೆ ಶ್ರೀಮತಿ ಸಾವಿತ್ರಮ್ಮನವರು. ಅವರ ದು:ಖವನ್ನು ನೋಡುವುದಕ್ಕೆ ಆಗುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅವರಿಗೆ ದು:ಖವನ್ನು ಭರಿಸತಕ್ಕಂಥ ಶಕ್ತಿಯನ್ನು ಭಗವಂತನು ನೀಡಲೆಂದು ಪ್ರಾರ್ಥಿಸುತ್ತಾ, ಅವರ ಒಬ್ಬ ಮಗ ಇವತ್ತಿಗೂ ಸಹ ಮನೆ ಚಿಕ್ಕದು ಎಂದು ಎಲ್‌ಹೆಚ್‌ನಲ್ಲಿ ಇರುತ್ತಾರೆ. ಇಂತಹ ಆದರ್ಶ ವ್ಯಕ್ತಿ, ಹಾಗೂ ಇಂತಹ ಪ್ರಾಮಾಣಿಕ ಜೀವನವನ್ನು ನಡೆಸಿದವರು ಭೈರೇಗೌಡರು. ಇಂತಹ ಒಬ್ಬ ರಾಜಕಾರಣಿ ನೆನಪಿನಲ್ಲಿ ಒಂದು ರಾಗಿ ತಳಿಗೆ ಶ್ರೀಮಾನ್ ಭೈರೇಗೌಡರ ಹೆಸರನ್ನು ಇಟ್ಟರೆ ಬಹಳ ದಿನಗಳ ಕಾಲ ಅವರು ಮಾಡಿರತಕ್ಕಂಥ ಹೋರಾಟಕ್ಕೆ ಒಂದು ಸ್ಮಾರಕವಾಗುತ್ತದೆ. ಅದನ್ನು ಜ್ಞಾಪಕದಲ್ಲಿಟ್ಟುಕೊಳ್ಳುತ್ತಾರೆ. ಕೃಷಿ ವಿಶ್ವವಿದ್ಯಾಲಯದಲ್ಲಿ ಅನೇಕ ಇಂಡಾಫ್–4–5 ಎಂದು ಬೇಕಾದಷ್ಟು ಹೆಸರು ಇಟ್ಟಿದ್ದಾರೆ. ಅದರಲ್ಲಿ ಮಾನ್ಯ ಭೈರೇಗೌಡರು ಈ ಕ್ಷೇತ್ರಕ್ಕೆ ಬಹಳ ಅಪಾರವಾದಂತಹ ಹಾಗೂ ದೊಡ್ಡ ಸೇವೆ ಮಾಡಿದ್ದಾರೆ. ಪಕ್ಷಾತೀತವಾಗಿ ನೋಡತತಕ್ಕಂಥ ದೃಷ್ಟಿಕೋನವನ್ನು ಎಲ್ಲರೂ ಒಪ್ಪುತ್ತೀರಿ ಎಂದು ಹೇಳುತ್ತಾ ಅವರ ಹೆಸರಿನಲ್ಲಿ ಸ್ಮಾರಕವನ್ನು ಮಾಡಬೇಕು, ಅವರ ಆತ್ಮಕ್ಕೆ ನಾನು ಈ ಸಂದರ್ಭದಲ್ಲಿ ಶಾಂತಿಯನ್ನು ಕೋರಿ ಅವರ ಕುಟುಂಬ ವರ್ಗದವರಿಗೆ ಮತ್ತು ಅವರಿಗೆ ಇರತಕ್ಕಂಥ ಲಕ್ಷಾಂತರ ಅಭಿಮಾನಿಗಳಿಗೆ ದು:ಖವನ್ನು ಭರಿಸತಕ್ಕಂಥ ಶಕ್ತಿಯನ್ನು ಕೊಡಲಿ ಎಂದು ಹೇಳಿ. ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ವಿ. ಮುನಿಯಪ್ಪ (ಭೂವಿಜ್ಞಾನ ಹಾಗೂ ಅಂತರ್ಜಲ ಖಾತೆ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಭೈರೇಗೌಡರ ನಿಧನ ಇವತ್ತು ನಮಗೆಲ್ಲಾ ಒಂದು ರೀತಿ ದಂಗು ಬಡಿದ ಹಾಗೆ ಆಗಿದೆ. ಇವತ್ತು ಬೆಳಿಗ್ಗೆ ಆರು ಮುಕ್ಕಾಲು ಗಂಟೆಗೆ ನಮ್ಮ ಮನೆಗೆ ಫೋನ್ ಬಂತು. ಮಾನ್ಯ ಭೈರೇಗೌಡರು ತೀರಿ ಹೋಗಿದ್ದಾರೆ ಎಂದರೆ ಖಂಡಿತವಾಗಿ ನನಗೆ ನಂಬುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಯಾರೋ ದೂರವಾಣಿ ಮುಖಾಂತರ ಸುಳ್ಳು ಸುದ್ದಿ ಮುಟ್ಟಿಸಿ ಗಾಬರಿಪಡಿಸತಕ್ಕಂಥ ಕೆಲಸ ಮಾಡುತ್ತಿದ್ದಾರೆ ಎನ್ನುವಂತಹ ಅನುಮಾನ ವಾಸ್ತವವಾಗಿ ಬಂತು. ತತ್‌ಕ್ಷಣ ನಾನು ಶ್ರೀನಿವಾಸಗೌಡರಿಗೆ ಫೋನ್ ಮಾಡಿದೆ. ಅವರು ಆಗತಾನೆ ವೋಕಾರ್ಡ್ ಆಸ್ಪತ್ರೆಯಲ್ಲಿ ಇದ್ದರು. ಅವರು ಈ ರೀತಿಯಾಗಿದೆ ಅನಿರೀಕ್ಷಿತವಾಗಿ ಯಾರಿಗೂ ಇದರ ಸುಳಿವು ಇಲ್ಲದೆ ಅವರು ನಿಧನ ಹೊಂದಿದ್ದಾರೆ ಎನ್ನುವ

ಮಾತನ್ನು ಹೇಳಿದಾಗ ವೈಯುಕ್ತಿಕವಾಗಿ ನನಗೆ ತಡೆದುಕೊಳ್ಳುವುದಕ್ಕಾಗಲಿಲ್ಲ. ರಾಜಕಾರಣದಲ್ಲಿ ನಮಗೂ ಅವರಿಗೂ ವೈಯುಕ್ತಿಕವಾಗಿ ದ್ವೇಷ ಇತ್ತು. ಆದರೆ ಪ್ರಪ್ರಥಮವಾಗಿ ನಾನು 1983 ರಲ್ಲಿ ವಿಧಾನಸಭೆಗೆ ಬಂದಾಗ ಅವರು ಜೊತೆಯಲ್ಲಿ ಇದ್ದು, ಈ ರಾಜಕಾರಣ ಯಾವರೀತಿ ಮಾಡಬೇಕು, ಯಾವರೀತಿ ಆಗಿ ಹೋಗಬೇಕೆಂದು ಹೇಳಿದ್ದರು. ಮತ್ತು ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ ಕಾಂಗ್ರೆಸ್ ಪಾರ್ಟಿ ಬಗ್ಗೆ ಅವರಿಗೆ ಸ್ವಲ್ಪ ಅಸಹನೆ ಇತ್ತು. ಅವರು ಕಾಂಗ್ರೆಸ್ ಪಕ್ಷದ ಬಗ್ಗೆ ಬಹಳ ದ್ವೇಷ ಮಾಡುತ್ತಿದ್ದರು. ಅದಕ್ಕೆ ಬೇರೆ ಬೇರೆ ಕಾರಣಗಳಿದ್ದವು. ಅವರು ಮೂಲಭೂತವಾಗಿ ಕಮ್ಯೂನಿಸ್ಟ್ ಬೇಸ್‌ನಿಂದ ಬಂದಿರತಕ್ಕಂಥವರು. ಅವರು ಅದರ ತತ್ವಗಳನ್ನು ಅಳವಡಿಸಿಕೊಂಡಿದ್ದರು, ಹಾಗೂ ಮೈಗೂಡಿಸಿಕೊಂಡಿದ್ದರು. ಜನತಾ ದಳದ ಪಕ್ಷದಲ್ಲಿ ಇದ್ದಾಗಲೂ ಸಹ ಅದರ ಕೆಲವು ವಿಚಾರಧಾರೆಗಳನ್ನು ಅವರು ಸಹಿಸುತ್ತಿರಲಿಲ್ಲ. ಅವರದೇ ಆದಂತಹ ರೀತಿಯಲ್ಲಿ ಅದನ್ನು ಪಾರ್ಟಿ ಒಳಗಡೆ ವಿರೋಧ ಮಾಡುತ್ತಿದ್ದರು. ಎಲ್ಲಕ್ಕೂ ಮಿಗಿಲಾಗಿ ಮಾನ್ಯ ನಾಯಕರು ಹಾಗೂ ಸಭಾನಾಯಕರು ಹೇಳಿದ ಹಾಗೆ ಅವರಿಗೆ ರೈತರ ಬಗ್ಗೆ ಅವರದೇ ಆದಂತಹ ವಿಶೇಷವಾದಂತಹ ಕಾಳಜಿ. ಆ ಕಾಳಜಿ ಬಗ್ಗೆ ಹೇಳುವುದಾದರೆ ಸಮಸ್ಯೆ ಬಂದಾಗ ಪಕ್ಷಾತೀತವಾಗಿ ಆ ಸಮಸ್ಯೆಗೆ ಎಲ್ಲರೂ ಒಟ್ಟಾಗಿ ಕೂಡಬೇಕು, ಇದಕ್ಕೆ ಹೋರಾಟ ಮಾಡಬೇಕು, ಇದಕ್ಕೆ ಏನಾದರೂ ಪರಿಹಾರ ಕಂಡುಕೊಳ್ಳಬೇಕೆಂದು ಎನ್ನುವಂತಹ ಕಾಳಜಿ ಬಹಳ ಅಪರೂಪವಾದಂತಹ ವ್ಯಕ್ತಿಗಳಲ್ಲಿ ಕಾಣಿಸುವಂತಾದ್ದು ಇದೆ. ಅವರು ರೈತರ ಬಗ್ಗೆ ವಿಶೇಷವಾದಂತಹ ಕಾಳಜಿಯನ್ನು ಇಟ್ಟುಕೊಂಡು, ಸದಾಕಾಲ ರೈತರನ್ನು ಎಚ್ಚರಿಸತಕ್ಕಂಥಾದ್ದು, ಜಾಗೃತವಾಗಿರಿ ಎಂದು ಹೇಳತಕ್ಕಂಥಾದ್ದು ಹಾಗೂ ಆ ರೈತರು ಸಂಘಟನೆಯಾಗಬೇಕು ಎನ್ನುವಂತಹ ವಿಚಾರದಲ್ಲಿ ಬಹಳ ಸತತವಾಗಿ ಯಾವುದೆ ಸಮಸ್ಯೆ ಬರಲಿ ಪ್ರಯತ್ನ ಮಾಡುತ್ತಿದ್ದರು. ರೈತರ ಸಂಘಟನೆಯಾಗಬೇಕು ರೈತರ ಸಂಘಟನೆ ಮುಖಾಂತರ ನೀವು ಈ ಸರ್ಕಾರದ ಮೇಲೆ ಒತ್ತಡ ತರಬೇಕು, ನಿಮ್ಮ ಸಮಸ್ಯೆಗಳಿಗೆ ನೀವು ಪರಿಹಾರ ಕಂಡುಕೊಳ್ಳಬೇಕಾದರೆ ಸಂಘಟನೆ ಬಹಳ ಮುಖ್ಯ ಎನ್ನುವಂತಹ ಮಾತನ್ನು ಆಗಿಂದ್ದಾಗ್ಗೆ ರೈತರ ಸಭೆಗಳಲ್ಲಿ ಹೇಳುತ್ತಿರುವುದನ್ನು ನಾನು ಅನೇಕ ಸಲ ಅವರ ಜೊತೆಯಲ್ಲಿ ನೋಡಿದಾಗ ಕಂಡಿದ್ದೇನೆ. 1991–92ರಲ್ಲಿ ರೇಷ್ಮೆ ಸಚಿವ ಆಗಿದ್ದಾಗ ಆಗ ಫೆಬ್ರಿನ್ ಎಂದು ಡಿಸೀಜ್ ಬಂತು. ನಾವ್ಯಾರು ನಿರೀಕ್ಷೆ ಮಾಡಲಿಲ್ಲ. ಆ ಸಂದರ್ಭದಲ್ಲಿ ಅವರು ಯಾವರೀತಿಯಾಗಿ ಸೈಂಟಿಫಿಕ್ ಮೆಥೆಡ್ಸ್ ಅಡಾಪ್ಟ್ ಮಾಡಿದರೆ ಈ ರೋಗವನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಿ ತನ್ನದೇ ಆದಂತಹ ರೀತಿಯಲ್ಲಿ ಅನೇಕ ಸಲಹೆಗಳನ್ನು ಅವರು ಕೊಟ್ಟರು. ಅವರು ನೋಡಪ್ಪ, ಈ ರೀತಿ ಇದೆ ನಿಮ್ಮ ಅಧಿಕಾರಿಗಳನ್ನು ಕರೆದು ಇದನ್ನು ತೀವ್ರತೆಯಿಂದ ತಡೆಗಟ್ಟುವುದಕ್ಕೆ ಮುಂಜಾಗ್ರತೆ ಕ್ರಮಗಳನ್ನು ನಿರ್ವಹಿಸದೆ ಹೋದರೆ ಈ ರೇಷ್ಮೆ ತಳಿ ನಮ್ಮ ರಾಜ್ಯ ಬಿಟ್ಟು ಹೋಗುತ್ತದೆ. ಅಂತಹ ಒಂದು ದುಸ್ಥಿತಿಗೆ ಬಂದಿದೆ. ಅದಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ವೈಯುಕ್ತಿಕವಾಗಿ ನಮ್ಮನ್ನು ಕರೆದು ಹೇಳಿರುವುದನ್ನು ನಾನು ಖಂಡಿತವಾಗಿ ಮರೆಯುವ ಹಾಗೆ ಇಲ್ಲ. ಅದೇ ರೀತಿ ಸಭೆಯಲ್ಲಿ ಸಹ ಎರಡು ಗಂಟೆ ಭಾಷಣ ಮಾಡಿ ಈ ರೇಷ್ಮೆ ತಳಿ, ಅದರ ಇತಿ ಹಾಸ, ಅದರಿಂದ ಯಾವರೀತಿ ನಮ್ಮ ಜೀವನ ಅವಲಂಬಿಸಿದೆ ಎನ್ನುವ ಅನೇಕ ವಿಚಾರಗಳನ್ನು ಈ ಸಭೆಗೆ ಮನವರಿಕೆ ಮಾಡಿಕೊಡುವುದರ ಮುಖಾಂತರ ರೇಷ್ಮೆ ಕೃಷಿಯ ಪ್ರಾಮುಖ್ಯತೆಯನ್ನು ನಮಗೆಲ್ಲರಿಗೂ ಮನವರಿಕೆ ಮಾಡಿಕೊಡುತ್ತಿದ್ದರು. ನಾವೂ ಕೂಡ ರೇಷ್ಮೆ ಕೃಷಿಯಿಂದ ಬಂದವರಾದರೂ ಅವರಷ್ಟು ಆಳವಾಗಿ ತಿಳಿದುಕೊಳ್ಳುವುದಕ್ಕೆ ಯಾರಿಗೂ ಸಾಧ್ಯವಾಗಿರಲಿಲ್ಲ. ಅಷ್ಟೊಂದು ಆಳವಾಗಿ ಅದರಲ್ಲಿ ಅವರು

ಅಧ್ಯಯನ ಮಾಡಿ, ಅದರಲ್ಲಿ ಇರತಕ್ಕಂಥ ವೈಜ್ಞಾನಿಕವಾದಂತಹ ವಿಚಾರಗಳನ್ನು ಮನವರಿಕೆ ಮಾಡಿಕೊಟ್ಟು, ಇಲಾಖೆಗಳೂ ಸಹ ಅನೇಕ ವಿಚಾರಗಳಲ್ಲಿ ಗಾಬರಿ ಪಡತಕ್ಕಂಥ ವಿಚಾರಗಳ ಬಗ್ಗೆ ಅವರು ಮನವರಿಕೆ ಮಾಡಿಕೊಟ್ಟರು. ಈ ರೀತಿಯಾಗಿ ರೈತರಿಗೆ ಸಮಸ್ಯೆ ಬಂದಾಗ ರೈತ ಸಮುದಾಯಕ್ಕೆ ತೊಂದರೆ ಬಂದಾಗ ತಮ್ಮನ್ನು ತೊಡಗಿಸಿಕೊಂಡು ತನ್ನದೇ ಆದಂತಹ ರೀತಿಯಲ್ಲಿ ರೈತರಿಗೆ ಕೊಟ್ಟಿರುವಂತಹ ಕೊಡುಗೆ ನಾವ್ಯಾರೂ ಮರೆಯುವ ಹಾಗೆ ಇಲ್ಲ. ಅಂತಹ ಅಪಾರವಾದಂತಹ ಸೇವೆ ಮಾಡುವುದರ ಮೂಲಕ ಅವರು ನಮ್ಮ ಜಿಲ್ಲೆಯಲ್ಲಿ ಅಲ್ಲ, ರಾಜ್ಯದಲ್ಲಿ ಒಂದು ಶಕ್ತಿಯಾಗಿ ಬೆಳೆದಿದ್ದರು. ಅನೇಕ ವಿಚಾರಗಳಲ್ಲಿ ತನ್ನದೇ ಆದಂತಹ ಸೈದ್ಧಾಂತಿಕವಾದಂತಹ ವಿಚಾರಧಾರೆಗಳನ್ನು ಇಟ್ಟುಕೊಂಡಿದ್ದರು. ಆ ವಿಚಾರ ಧಾರೆಗಳಿಗೆ ಯಾರೇ ಅಡ್ಡ ಬಂದರೂ, ಅವರು ಎಷ್ಟೇ ದೊಡ್ಡವರಿದ್ದರೂ ಕೂಡ ಅದನ್ನು ಸಹನೆ ಮಾಡುತ್ತಿರಲಿಲ್ಲ. ಅವರ ಜೊತೆ ರಾಜಿ ಮಾಡಿಕೊಳ್ಳುವುದಕ್ಕೆ ಅವರು ತಯಾರಿರಲಿಲ್ಲ. ಇತ್ತೀಚೆಗೆ ಆದಂತಹ ರಾಜಕೀಯ ಬೆಳವಣಿಗೆಗಳು ಎಷ್ಟೇ ಆದರೂ ಹಿಂದಿನ ಕೆಲವು ಕಹಿ ನೆನಪುಗಳಿಂದ ಹೊಂದಾಣಿಕೆ ಮಾಡಿಕೊಳ್ಳತಕ್ಕಂಥ ಪರಿಸ್ಥಿತಿ ರಾಜಕಾರಣವಾಗಿ ಅನಿವಾರ್ಯತೆ ಇದ್ದರೂ ಸಹ ವೈಯುಕ್ತಿಕವಾಗಿ ಅವರ ಮನಸ್ಸು ಒಪ್ಪಿರಲಿಲ್ಲ. ಅವರ ಅನೇಕ ಕ್ಲೋಸ್ ಅಸೋಸಿಯೇಟ್ಸ್ ಅಂತ ಹೇಳುತ್ತಾರೆ ಅವರ ಜೊತೆ ಅವರು ವ್ಯಕ್ತ ಮಾಡಿರತಕ್ಕಂಥ ಸಂದರ್ಭದಲ್ಲಿ ಇದಕ್ಕಿಂತ ವೈಯುಕ್ತಿಕವಾಗಿ ನಾನೇ ರಾಜಕಾರಣ, ಹೋರಾಟ ಮಾಡಿದರೆ ಏನು ತಪ್ಪಿದೆ ಈ ರೀತಿ ಸಂಘಟನೆ ಮಾಡಿ ನಾವೇನು ಸಾಧನೆ ಮಾಡುತ್ತೇವೆ ಎನ್ನುವ ಅಭಿಪ್ರಾಯವನ್ನೂ ಕೂಡ ವ್ಯಕ್ತ ಮಾಡಿದ್ದಾರೆ. ಈ ರೀತಿಯಾಗಿ ಕೆಲವು ವಿಚಾರಧಾರೆಗಳಿಗೆ ಅವರು ಬದ್ಧರಾಗಿದ್ದು ಬಹಳ ಉತ್ತಮ ರಾಜಕಾರಣಿಯಾಗಿದ್ದರು. ಇವತ್ತು ನಮ್ಮ ಜಿಲ್ಲೆಯಲ್ಲಿ ಅವರು ಇದ್ದುದ್ದರಿಂದ ಒಂದು ರೀತಿ ನಮಗೆ ಭಯ ಇತ್ತು. ಅದೇನೆಂದರೆ ನಮ್ಮ ಭೈರೇಗೌಡರು ಇದ್ದಾರೆ, ನಾವು ಸ್ವಲ್ಪ ಸರಿಯಾದ ರೀತಿಯಲ್ಲಿ ಆಡಳಿತ ನಡೆಸಬೇಕು, ಅಧಿಕಾರಿಗಳು ಏನಾದರೂ ಸ್ವಲ್ಪಮಟ್ಟಿಗೆ ಭ್ರಷ್ಟಾಚಾರ ಅಧಿಕಾರಿಗಳು ಎಂದರೆ ಅವರ ಮುಖವನ್ನು ನೋಡುವುದೇ ಇಲ್ಲ, ಅವರು ಅಷ್ಟು ಅಸಹ್ಯವಾಗಿ ವರ್ತನೆ ಮಾಡುತ್ತಿದ್ದರು. ನಮಗೆ ಇವರು ಏಕೆ ಇಷ್ಟು ವರ್ತನೆ ಮಾಡುತ್ತಾರೆ ಎಂದೆನಿಸುತ್ತಿತ್ತು. ಅಂತಹ ಭ್ರಷ್ಟ ಅಧಿಕಾರಿಗಳನ್ನು ಅಷ್ಟೇ ವಿರೋಧ ಮಾಡುತ್ತಿದ್ದರು. ಈ ರೀತಿಯಾಗಿ ಇವತ್ತು ಜಿಲ್ಲಾಡಳಿತದಲ್ಲಿ ಹಾಗೂ ರಾಜ್ಯಮಟ್ಟದಲ್ಲಿ ಅಷ್ಟೆ ಆಡಳಿತದ ಬಗ್ಗೆ ತನ್ನದೇ ಆದಂತಹ ರೀತಿಯಲ್ಲಿ ಈ ವ್ಯವಸ್ಥೆ ಬಗ್ಗೆ ಅವರಿಗೆ ಅನೇಕ ಸಂದರ್ಭದಲ್ಲಿ ನೋವಿತ್ತು. ಆ ರೀತಿಯಾಗಿ ಜಿಲ್ಲಾ ಆಡಳಿತದಲ್ಲೂ ಅಷ್ಟೆ, ರಾಜ್ಯ ಮಟ್ಟದಲ್ಲೂ ಅಷ್ಟೆ, ಆಡಳಿತದ ಬಗ್ಗೆ ತಮ್ಮದೇ ಆದಂತಹ ರೀತಿಯಲ್ಲಿ, ಮತ್ತೆ ಈ ವ್ಯವಸ್ಥೆಯ ಬಗ್ಗೆ ತಮ್ಮದೇ ಆದಂತಹ ನೋವು ಇತ್ತು, ಅನೇಕ ಸಂದರ್ಭಗಳಲ್ಲಿ ಈ ರೀತಿಯ ಬ್ಯುರೊಕ್ರಾಟ್ಸ್ ವ್ಯವಸ್ಥೆಗಳಲ್ಲಿ ಏನು ನ್ಯೂನತೆಗಳು ಇವೆ, ಎಷ್ಟರಮಟ್ಟಿಗೆ ಅವರಿಗೆ ಕನ್‌ಸರ್ನ ಇಲ್ಲವೆನ್ನುವ ಬಗ್ಗೆ, ಅವರು ತಮ್ಮದೇ ಆದಂತಹ ರೀತಿಯಲ್ಲಿ ಅನೇಕ ಸಂದರ್ಭಗಳಲ್ಲಿ ಮಾತನಾಡಿರುವಂಥಾದ್ದು ಉಂಟು. ಈ ರೀತಿಯಾಗಿ ಮಾನ್ಯ ಭೈರೇಗೌಡರ ಬಗ್ಗೆ ಎಲ್ಲಾ ನಾಯಕರುಗಳು ಹೇಳಿದ ಹಾಗೆ, ಬಹಳ ಅಪರೂಪವಾದಂತಹ ವ್ಯಕ್ತಿಯಾಗಿದ್ದರು, ಅದರಲ್ಲೂ ವಿಶೇಷವಾಗಿ ರೈತರ ಸಮುದಾಯಕ್ಕೆ, ತನ್ನದೇ ಆದಂತಹ ರೀತಿಯಲ್ಲಿ, ತಮ್ಮ ಜೀವನ ಪರ್ಯಂತ ಕಾಳಜಿಯನ್ನು ಕೊಟ್ಟಂತಹ ವ್ಯಕ್ತಿಯಾಗಿ ಬೆಳೆದು ಬಂದಿದ್ದರು, ಇತ್ತೀಚೆಗೆ ರಾಜಕಾರಣದಲ್ಲಿ ಸ್ವಲ್ಪಮಟ್ಟಿಗೆ ನಮಗೆ ಲೋಕಲ್ಲಾಗಿ ರಾಜಕಾರಣದಲ್ಲಿ ಮಾತುಕತೆಗಳು ಕಡಿಮೆಯಾಗಿದ್ದರೂ, ಕೆಲವು ವಿಚಾರಗಳಲ್ಲಿ ರೇಷ್ಮೆ ಕೃಷಿ ವಿಚಾರವಾಗಿ, ನೆಲಕ್ಕೆ ಬಿದ್ದು, ರೈತರೆಲ್ಲರೂ ದಂಗೆ ಏಳುವಂತಹ ಸಂದರ್ಭದಲ್ಲಿ ಎಲ್ಲರೂ ನಿಮ್ಮ ಮಂತ್ರಿಯವರಲ್ಲಿ, ಹೇಳಿ

ಮುಖ್ಯಮಂತ್ರಿಯವರಲ್ಲಿ ಒತ್ತಡವನ್ನು ತಂದು, ಏನಾದರೂ ಮಾಡಿ ಈ ರೈತ ಸಮುದಾಯಕ್ಕೆ ಒಂದು ಪರಿಹಾರವನ್ನು ಕೊಡಿಸಿ, ಎಂಬ ಒತ್ತಾಯವನ್ನು ತಂದರು. ನಮ್ಮ ಜಿಲ್ಲೆಯಲ್ಲಿ ಈ ರೇಷ್ಮೆ ಕೃಷಿ ನಲವತ್ತು ರೂಪಾಯಿಗಳಿಗೆ ಹೋಗಿದೆ, ಇದರ ಬೆಲೆ ಕುಸಿದಿದೆ, ಇದಕ್ಕೆ ಏನಾದರೂ ಒಂದು ದಾರಿ ಮಾಡದಿದ್ದರೆ, ರಕ್ಷಣೆಗೆ ಬರದಿದ್ದರೆ ಆಗುವುದಿಲ್ಲವೆಂದಾಗ ಆಗ ನಾವೆಲ್ಲರೂ ಮಾನ್ಯ ಮುಖ್ಯ ಮಂತ್ರಿಯವರ ಹತ್ತಿರ ಬಂದಾಗ, ಏನು ಮಾಡುವುದು ಇದಕ್ಕೆ ಎಂದು, ಇದನ್ನು ಕೇಂದ್ರ ಸರ್ಕಾರದೊಡನೆ ಚರ್ಚೆ ಮಾಡಿ, ಕೇಂದ್ರದ ರೇಷ್ಮೆ ಮಂಡಳಿಯ ಅಧ್ಯಕ್ಷರಾದಂತಹ ಮಾನ್ಯ ಕೆ.ಎಸ್.ಈಶ್ವರಪ್ಪನವರುಮ ನಾವೆಲ್ಲರೂ ಸೇರಿ, ಕನಿಷ್ಟ ಕೆ.ಜಿ.ಗೆ 10ರೂಪಾಯಿಗಳನ್ನು ಕೊಡುವುದಕ್ಕೆ ಸಾಧ್ಯವಿದೆಯೆಂದು ಹೇಳಿದಾಗ, ಮಾನ್ಯ ಮುಖ್ಯಮಂತ್ರಿಯವರು, ಮಾನ್ಯ ಭೈರೇಗೌಡರು, ಎಲ್ಲರೂ ಸೇರಿ, ರೈತರ ಸಮುದಾಯಕ್ಕೆ ಸಲಹೆಯನ್ನು ಕೊಟ್ಟಿದ್ದಾರೆ. ಇದಕ್ಕೆ ಏನಾದರೂ ಪರಿಹಾರವನ್ನು ಕೊಡಬೇಕೆಂದು ಹೇಳಿದರು, ರೈತರು ಬಹಳ ಕಷ್ಟದಲ್ಲಿದ್ದಾರೆ, ತೊಂದರೆ ಇದೆ ಎಂದು ಹೇಳಿದಾಗ 10 ರೂಪಾಯಿಗಳನ್ನು ಘೋಷಣೆ ಮಾಡಿದಾಗ, ಇದಕ್ಕೆ ಅವರು ಬಹಳ ಸಂತೋಷ ಪಟ್ಟು, ವೆಲ್‌ಕಂ ಮಾಡಿದರು. ಸರ್ಕಾರ ತೆಗೆದುಕೊಂಡ ಕ್ರಮದ ಬಗ್ಗೆ, ರೈತರ ಸಹಾಯಕ್ಕೆ ಬಂದಾಗ ಅದನ್ನು ಸ್ವಾಗತ ಮಾಡುವಂತಹ ದೊಡ್ಡ ಮನೋಭಾವನ್ನೂ ಸಹ ಅವರು ಇಟ್ಟುಕೊಂಡಿದ್ದರು. ಈ ರೀತಿಯಾಗಿ ಒಬ್ಬ ಉತ್ತಮ ಆದರ್ಶ ರಾಜಕಾರಣಿಯಾಗಿ, ತಮ್ಮದೇ ಆದಂತಹ ವ್ಯೆಯಕ್ತಿಕ ವರ್ಚಸ್ಸನ್ನು ಬೆಳೆಸಿಕೊಂಡಂತಹ ಇವರು ನಮ್ಮನ್ನು ಅಗಲಿರುವಂಥಾದ್ದು, ಇದು ನಮಗೆ ಮಾತ್ರವಲ್ಲ, ಇಡೀ ರಾಜ್ಯಕ್ಕೆ ನಷ್ಟವಾಗಿದೆ, ನಾನು ಇವತ್ತು ಬೆಳಿಗ್ಗೆ ಅವರ ಮನೆಗೆ ಹೋಗಿದ್ದೆ, ಆಗ ತಾನೇ ದೇಹವನ್ನು ತಂದು ಅವರ ಮನೆಯಲ್ಲಿ ಇಟ್ಟಿದ್ದರು, ಆ ಕುಟುಂಬದ ಗೋಳನ್ನು ನೋಡಿ ನನಗಂತೂ ಬಹಳ ದು:ಖವಾಯಿತು, ಈ ವಿಧಿವಶ ಹೇಗೆ ಆಗುತ್ತದೆ, ಆ ವಿಧಿ ವ್ಯಕ್ತಿಯನ್ನು ತೆಗೆದುಕೊಂಡಾಗ ನೋವುಗಳು ಹೇಗೆ ಆಗುತ್ತದೆ, ಅದನ್ನು ನೋಡಿದಾಗ, ಆ ಕುಟುಂಬಗಳ ಬಹು ಮುಖ್ಯವಾದಂತಹ ವ್ಯಕ್ತಿಗಳನ್ನು ಕಳೆದುಕೊಂಡಾಗ, ಆ ಕುಟುಂಬಗಳು ಎಷ್ಟು ಬೇಗ ಅನಾಥವಾಗುತ್ತೆಂಬುದನ್ನು ನಾವು ಅಲ್ಲಿ ನೋಡಿದಾಗ, ನಮಗೆ ಅದನ್ನು ತಡೆದುಕೊಳ್ಳುವುದಕ್ಕೆ ಆಗುವುದಿಲ್ಲ. ಆ ತಡೆದುಕೊಳ್ಳುವಂತಹ ಶಕ್ತಿಯನ್ನು ಭಗವಂತನು ಆ ಕುಟುಂಬಕ್ಕೆ ಕೊಡಲಿ, ಆ ಕುಟುಂಬ ವರ್ಗದವರಿಗೆ ಆಗಿರುವಂತಹ ನಷ್ಟವನ್ನು ಭರಿಸುವಂತಹ ಶಕ್ತಿಯನ್ನು ಆ ಭಗವಂತನು ಕೊಟ್ಟು, ಅವರ ಆತ್ಮಕ್ಕೆ ಶಾಂತಿ ದೊರೆಯಲಿ ಎಂದು ಆ ಭಗವಂತನಲ್ಲಿ ಪ್ರಾರ್ಥನೆ ಮಾಡಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೇ, ತಾವು ಈ ದಿವಸ ಸೂಚನೆ ಮಾಡಿರುವಂತಹ ಈ ಸಂತಾಪ ಸೂಚನೆಗೆ, ತಮ್ಮ ಅಭಿಪ್ರಾಯಕ್ಕೆ, ಈ ಸದನದ ನಾಯಕರು ಹಾಗೂ ಪ್ರತಿಪಕ್ಷದ ನಾಯಕರು, ಹಾಗೂ ಇತರ ಪಕ್ಷದ ಮುಖಂಡರು, ವ್ಯಕ್ತ ಮಾಡಿದಂತಹ ಅಭಿಪ್ರಾಯಕ್ಕೆ, ನನ್ನ ಧ್ವನಿಗೂಡಿಸುತ್ತಾ, ಸನ್ಮಾನ್ಯ ಸಿ.ಭೈರೇಗೌಡರು, ಈ ಸದನದಲ್ಲಿ ಇಲ್ಲ, ಎಂದು ನಾನು ನೆನಪಿಸಿಕೊಳ್ಳುವುದೇ ಕಷ್ಟ, ಅವರ ಹಠಾತ್ ನಿಧನದಿಂದ, ಬಹುಶ: ಅನೇಕ ದಿವಸಗಳಿಂದ ಆ ಕುರ್ಚಿ ಖಾಲಿ ಇರುತ್ತದೆ. ಅದನ್ನು ಅಷ್ಟು ಸುಲಭವಾಗಿ ತುಂಬುವುದಕ್ಕೆ ಆಗುವುದಿಲ್ಲ. ನಮ್ಮ ಮತ್ತು ಅವರ ಸ್ನೇಹ ತುಂಬಾ ನಿಕಟವಾದಂಥಾದ್ದು, ಇತ್ತೀಚೆಗೆ ಮೂರ್‍ನಾಲ್ಕು ದಿವಸಗಳ ಕೆಳಗೆ ನಮ್ಮ ಮನೆಗೆ ಕೆಲವು ವಿಚಾರಗಳನ್ನು ಮಾತನಾಡುವುದಕ್ಕೆ ಬಂದಿದ್ದರು. ಅವರು ಆ ರೀತಿ ಆಗಾಗ ಬರುತ್ತಿದ್ದರು, ಆದರೆ ಅವರು ನನ್ನ ನೆನಪಿನಲ್ಲಿ ಏಕೆ ಉಳಿದಿದ್ದಾರೆ, ಅದು ನಾನು ಸಂಸದೀಯ ವ್ಯವಹಾರಗಳ ಮಂತ್ರಿಯಾಗಿ ನಾನು ಅವರ ನಡವಳಿಕೆಯನ್ನು ಗಮನಿಸಿದ್ದೇನೆ,

ಎಂದೂ ಅವರು ನಿಯಮಗಳ ಮತ್ತು ಸಂಸದೀಯ ನಡವಳಿಕೆಯ ಬಂಧಿಯಾದವರು ಅಲ್ಲ, ಅವರನ್ನು ಎಷ್ಟೇ ಇದರಲ್ಲಿ ಬಂಧಿಸಬೇಕೆಂದು ಪ್ರಯತ್ನಪಟ್ಟರೂ, ಅವರು ಅದನ್ನು ಕಳಚಿಕೊಂಡು ಬಿಡುತ್ತಿದ್ದರು, ಅವರು ತಮ್ಮದೇ ಆದಂತಹ ಸಂಸದೀಯ ನಡವಳಿಕೆಯನ್ನು ಇಲ್ಲಿ ಸ್ಥಾಪನೆ ಮಾಡಿ ಹೋಗಿದ್ದಾರೆ. ಯಾವ ಸಮಸ್ಯೆಯೋ, ಎಲ್ಲಿದೆಯೋ, ಹೇಗೆ ಅದು ಪ್ರಾರಂಭವಾಗಿದೆಯೋ, ಗೊತ್ತಿಲ್ಲ, ಮಾನ್ಯ ಭೈರೇಗೌಡರು ಸಭೆಗೆ ಬಂದರು ಎಂದರೆ, ಪುನ: ಅದನ್ನು ತೆಗೆದುಕೊಳ್ಳಬೇಕು, ಅಂತಹ ಒಂದು ಸಂಸದೀಯ ನಡವಳಿಕೆನಲ್ಲಿ ತಮ್ಮ ಛಾಪನ್ನು ಒತ್ತಿದವರು, ಅದನ್ನು ಅವರು ಇಲ್ಲಿ ಬಿಟ್ಟು ಹೋಗಿದ್ದಾರೆ, ಅವರು ಪ್ರಾಮಾಣಿಕವಾದಂತಹ ರಾಜಕಾರಣ ಮಗುವಿನಂತಹ ಮನಸ್ಸು, ಒಳ್ಳೆಯ ಸ್ನೇಹಿತ, ಆದರೆ ತುಂಬಾ ಕಠೋರ. ಸಾಮಾನ್ಯ ಜನರ ಆಸೆ, ಅಕಾಂಕ್ಷೆಗಳು, ಕನಿಷ್ಟ ಅಗತ್ಯಗಳು, ಅವಶ್ಯಕತೆಗಳ, ಬಗ್ಗೆ ತುಂಬಾ ಶ್ರದ್ಧೆ ಮತ್ತು ಆಸಕ್ತಿಯಿಂದ, ಸದನದ ಒಳಗಡೆ ಮತ್ತು ಹೊರಗಡೆ ಕೆಲಸವನ್ನು ಮಾಡುತ್ತಿದ್ದರು, ಮತ್ತೆ ಜೊತೆಗೂ ಅವರು ನಾವು ಕೆಲಸಗಳನ್ನು ಮಾಡಿದ್ದೇವೆ, ರಾಜ್ಯದ ರಾಜಕಾರಣದಲ್ಲಿ ಸುಮಾರು ಮೂರು ದಶಕಗಳ ಕಾಲ, ಅವಿಶ್ರಾಂತವಾಗಿ ದುಡಿಮೆ ಮಾಡಿದಂಥವರು, ಹೆಚ್ಚು ಜನರು ಇಷ್ಟು ದೀರ್ಘಕಾಲ ರಾಜ್ಯದ ಸೇವೆಯನ್ನು ಮಾಡಿದಂಥವರು ಬಹಳ ಕಡಿಮೆ, ಅಷ್ಟು ದಿವಸ ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಪ್ರೇಮವನ್ನು ಸಂಪಾದನೆಯನ್ನು ಮಾಡುವಂಥಾದ್ದು, ಅಸಾಧ್ಯವಾದಂತಹ ಮಾತು. ಒಂದಲ ಒಂದು ಕಾರಣಕ್ಕೆ, ಒಬ್ಬರಲ್ಲ ಒಬ್ಬರು, ತಮ್ಮದೇ ಆದಂತಹ ದೋಷಗಳನ್ನು ದೂರುಗಳನ್ನು, ಹೇಳುವುದುಂಟು. ಮಾನ್ಯ ಭೈರೇಗೌಡರಿಗೆ, ಆಡಂಬರದ ಅರಿವೇ ಇರಲಿಲ್ಲ, ತಮ್ಮ ಬದುಕೆಲ್ಲಾ, ಈ ರಾಜ್ಯದಲ್ಲಿ ರೈತರ ಸಂದಾಯ ಮೇಲೆಳಬೇಕು, ಮತ್ತೊಂದು ಕಡೆ ಜವಾಬ್ದಾರಿಯಿಲ್ಲದೆ ವೆಚ್ಚ ಕಡಿಮೆಯಾಗಬೇಕು, ಇವೆರಡು ಅವರ ಆದರ್ಶಗಳು, ಇವೆರಡನ್ನು ಕಡಿಮೆ ಮಾಡುವುದಕ್ಕೆ ತಮ್ಮ ಕಾಲದಲ್ಲಿ ಏನು ಪ್ರಯತ್ನವನ್ನು ಮಾಡಿದರೋ, ಕೊನೆಯ ತನಕ ಆ ಪ್ರಯತ್ನವನ್ನು ಮುಂದುವರೆಸಿದರು, ಅವರು ಇತ್ತೀಚಿನ ವರ್ಷಗಳಲ್ಲಿ ಸಂಸದೀಯ ಕಲಾಪಗಳಲ್ಲಿ ಕೈಹಾಕದೆ ಇರುವಂತಹ, ಅಭಿವ್ಯಕ್ತ ಮಾಡದೇ ಇರುವಂತಹ ಅಭಿಪ್ರಾಯಗಳು ಬಹಳ ಕಡಿಮೆ, ಶುದ್ಧವಾದಂತಹ ಚಾರಿತ್ರವನ್ನು ಇಟ್ಟುಕೊಂಡಿದ್ದರು. ನಾನು ಒಂದು ದಿವಸ ತಮಾಷೆಯಾಗಿ ಅವರನ್ನು ಚುನಾವಣೆ ಹೇಗೆ ಮಾಡುತ್ತೀರಿ, ಎಂದು ಕೇಳಿದೆ, ಅದಕ್ಕೆ ಅವರು ಏಕೆ ಎಂದರು, ಈ ಕಾಲದಲ್ಲಿ ಚುನಾವಣೆಯನ್ನು ಮಾಡಲು ಸಾಮಾನ್ಯನಿಗೆ ಸಾಧ್ಯವಿಲ್ಲ, ನೀವು ಚಾರಿತ್ರ್ಯಗಳನ್ನು ಉಳಿಸಿಕೊಂಡು, ಈ ಚುನಾವಣೆಯನ್ನೂ ಮಾಡುತ್ತೀರಿ, ಇದು ಹೇಗೆ? ಎಂದು ಕೇಳಿದೆ, ಅದಕ್ಕೆ ಅವರು ಅವರದೇ ಆದಂತಹ ಒಂದು ವಿವರಣೆಯನ್ನು ಕೊಟ್ಟರು. ನಾನು ಎಲ್ಲಿ ಚುನಾವಣೆ ಮಾಡುತ್ತೇನೆ, ಜನರು ಮಾಡುತ್ತಾರೆಂದು ಹೇಳಿದರು, ಕಳೆದ ಚುನಾವಣೆ ಮಾಡಿದ ಮೇಲೆ ದುಡ್ಡು ಇನ್ನೂ ನಲವತ್ತು ಸಾವಿರ ರೂಪಾಯಿಗಳು ಉಳಿದಿತ್ತು, ಇದನ್ನು ಏನು ಮಾಡುವುದೆಂದು ಜನರನ್ನೇ ಕೇಳಿ, ಆನಂತರ ಆ ಹಣವನ್ನು ಯಾವುದೋ, ಒಂದು ಒಳ್ಳೆಯ ಕೆಲಸಕ್ಕೆ ಕೊಟ್ಟೆ ಎಂದರು, ಬಹುಶ: ಎಕ್ಸೆಪ್ಷನಲ್ ಕೇಸ್ ಎಂದು ಕಾಣುತ್ತದೆ, ಹಾಗಾಗಿ ಮಾನ್ಯ ಭೈರೇಗೌಡರು ಆ ಕ್ಷೇತ್ರದ ಜನರ ಮನಸ್ಸಿನಲ್ಲಿ ಎಷ್ಟು ಹತ್ತಿರವಾಗಿ ನಿಕಟವಾದಂತಹ ಸಂಬಂಧವಿತ್ತು, ಎನ್ನುವುದು ಒಂದು ಭಾಗವಾದರೆ, ರಾಜ್ಯದ ರಾಜಕಾರಣದಲ್ಲಿ ಅವರ ಒಂದು ವಿಚಾರವನ್ನು ಹೇಳುವುದಾದರೆ ಶಿವಮೊಗ್ಗದಲ್ಲಿ ಡಾ.ಪ್ರಫುಲ್ ಚಂದ್ರ ಎನ್ನುವವರು ಇದ್ದಾರೆ. ಅವರನ್ನು ಪುಟ್ಟಣ್ಣ ಎಂದೂ ಸಹ ಕರೆಯುತ್ತಿದ್ದರು, ಕಬ್ಬು ಬೆಳೆಗಾರರು ಇದ್ದಾರೆ, ಅವರು ರೆಟೂನ್ ಕ್ರಾಫ್ಸ್ ತೆಗೆದುಯಿದ್ದರು ಅವರಿಗೆ ಡಾಕ್ಟರೇಟ್ ಕೊಡಬೇಕೆಂಬ ವಿಚಾರ ಪ್ರಸ್ತಾಪಕ್ಕೆ ಬಂತು. ಈ ವಿಚಾರವನ್ನು ನಾನೇ ಅವರೊಡನೆ ಪ್ರಸ್ತಾಪ ಮಾಡಿದೆ,

ಆಗ ಅವರೇ ಅಗ್ರಿಕಲ್ಚರ್ ಮಿನಿಸ್ಟರ್ ಆಗಿದ್ದರು, ಈ ವಿಷಯವನ್ನು ಅಗ್ರಿಕಲ್ಚರ್ ಯೂನಿವರ್ಸಿಟಿಗೆ ರೆಫರ್ ಮಾಡಿದರು, ಆದರೆ ಅವರು ಅದನ್ನು ಒಪ್ಪಲಿಲ್ಲ, ನಮಗೆಲ್ಲರಿಗೂ ಆಶ್ಚರ್ಯವಾಯಿತು, ರಾಜ್ಯಪಾಲರಿಗೆ ಹೇಳಿ, ವಿಶೇಷ ಸಭೆಯನ್ನು ಏರ್ಪಾಡು ಮಾಡಿ, ಡಾ: ಪ್ರಫುಲ್‌ಚಂದ್ರರವರಿಗೆ ಡಾಕ್ಟರೇಟ್ ಕೊಡಬೇಕೆಂದು ಹೇಳಿ ತಾವೇ ಸ್ವತಃ ಕುಳಿತುಕೊಂಡು ಇದು ಒಬ್ಬ ರೈತರ ಮಗನಿಗೆ ಸಿಗಬೇಕಾದಂಥಾದ್ದು, ಬೇಕಾದಷ್ಟು ಜನರು ಥೀಸಿಸ್ ಬರೆಯುವವರೆಲ್ಲರಿಗೂ ಡಾಕ್ಟರೇಟ್ ಸಿಗುತ್ತದೆ, ಆದರೆ ಇಂಥವರನ್ನು ಗುರುತಿಸುವಂಥಾದ್ದು ಬಹಳ ಕಡಿಮೆ, ಇವತ್ತಿಗೂ ಸಹ ಇದು ನನಗೆ ನೆನಪಿನಲ್ಲಿದೆ. ಡಾ: ಪ್ರಫುಲ್‌ಚಂದ್ರರವರನ್ನು ಗುರುತಿಸಿದಂತಹ ಒಬ್ಬ ನಾಯಕ ಶ್ರೀ ಭೈರೇಗೌಡರು. ಹೀಗೆ ಅವರು ತಮ್ಮ ಛಾಪನ್ನು ಎಲ್ಲಾ ವಿಭಾಗಗಳಲ್ಲೂ ಒತ್ತಿ, ನೆನಪುಗಳನ್ನು ಉಳಿಸಿಕೊಂಡು, ರಾಜ್ಯದ ರಾಜಕಾರಣದಲ್ಲಿ ತಮ್ಮದೇ ಆದಂತಹ ನಿಲುವಿನಿಂದ ಬೆಳೆದು ಬಾಳಿದಂತಹ ವ್ಯಕ್ತಿಯಾಗಿದ್ದಾರೆ, ಇವರ ಅಕಾಲಿಕ ಮರಣದಿಂದ, ಅವರ ಅಗಾಧವಾದಂತಹ ಸ್ನೇಹ ಸಮುದಾಯಕ್ಕೆ ಸಂಬಂಧಿಗಳಿಗೆ, ಸಂತಾಪ ಹೇಳುವುದು ಬಹಳ ಸುಲಭ, ಆದರೆ ಅದನ್ನು ಸಹಿಸಿಕೊಳ್ಳುವಂಥಾದ್ದು ಬಹಳ ಕಷ್ಟದ ಕೆಲಸ, ಹಾಗಾಗಿ ಇವರ ನಿಧನದಿಂದ ಶಾಸನ ಸಭೆಗೆ ತುಂಬಲಾಗದ ನಷ್ಟವಾಗಿದೆ, ರಾಜ್ಯದ ರಾಜಕಾರಣಕ್ಕೆ ಹಿರಿತನ ಕಡಿಮೆಯಾಗಿದೆ, ಹಾಗೂ ರಾಷ್ಟ್ರೀಯ ರಾಜಕಾರಣದಲ್ಲಿ ಅವರ ನೆನಪು ಉಳಿಯುವಂತಹ, ಅನೇಕ ಸಂದರ್ಭಗಳಲ್ಲಿ ಅವರ ನಿಲುವುಗಳು, ಅವರ ಉದಾತ್ತವಾದಂತಹ ನಿಲುವುಗಳು, ಅವರ ನೆನಪುಗಳನ್ನು ಶಾಶ್ವತವಾಗಿ ಉಳಿಸಬೇಕೆಂದು ಮಾನ್ಯ ಪಿ.ಜಿ.ಆರ್. ಸಿಂಧ್ಯರವರು ಏನು ಸಲಹೆಯನ್ನು ಮಾಡಿದ್ದಾರೆ, ಅದು ಸಮಯೋಚಿತವಾದಂತಹ ಸಲಹೆಯಾಗಿದೆ, ಆ ದಿಶೆಯಲ್ಲಿ ನಾವು ಆಲೋಚನೆಯನ್ನು ಮಾಡುತ್ತೇವೆನ್ನುವಂತಹ ಮಾತನ್ನು ಹೇಳುತ್ತಾ, ಎಲ್ಲರೂ ಅಭಿವ್ಯಕ್ತ ಮಾಡಿದಂತಹ, ಈ ಸಂತಾಪಕ್ಕೆ ನನ್ನ ಧ್ವನಿಯನ್ನು ಕೂಡಿಸುತ್ತಾ, ಅವರ ಆತ್ಮಕ್ಕೆ ದಯಾಮಯನಾದ ಭಗವಂತನು ಚಿರಶಾಂತಿಯನ್ನು ಮತ್ತು ಅವರ ಅಗಲಿಕೆಯ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಅವರ ದೊಡ್ಡ ಸಮೂಹಕ್ಕೆ ಭಗವಂತನು ಕರುಣಿಸಲಿ, ಎಂದು ಪ್ರಾರ್ಥನೆ ಮಾಡಿ, ನಾನು ಈ ಮೂಲಕ ಸಂತಾಪವನ್ನು ಸೂಚಿಸುತ್ತಾ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

11.10 ಎಎಂ

+ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ) : ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ ಕರ್ನಾಟಕದ ಕರಾಳದಿವಸವೆಂದು ನಾನು ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಒಬ್ಬ ಧೀಮಂತ ರೈತರ ನಾಯಕರು, ಬಡವರ ನಿಜವಾದ ಹಿತಚಿಂತಕರು, ಸಮಾಜದ ಅಗ್ರಗಣ್ಯರಾದ ಸನ್ಮಾನ್ಯ ಭೈರೇಗೌಡರು ನಿಧನರಾಗಿರುವುದು ಈ ರಾಜ್ಯದ ರೈತರಿಗೆ ಮತ್ತು ಬಡ ಜನತೆಯ ಸಮೂಹಕ್ಕೆ ದೊಡ್ಡ ಆಘಾತವಾಗಿದೆ. ಮಾನ್ಯ ಸಿಂಧ್ಯಾ ಹಾಗೂ ಮಾನ್ಯ ಚಂದ್ರೇಗೌಡರು ಹೇಳುವಂತೆ, ಭೈರೇಗೌಡರು ಸಾಮಾನ್ಯ ರಾಜಕಾರಣಿಯಲ್ಲ; ಅವರ ಜೀವನದಲ್ಲಿ ಪ್ರತಿದಿವಸವೂ ಕೂಡ ಬಡವರನ್ನು ಸಂಪರ್ಕ ಮಾಡಿ, ನೈಜವಾಗಿ ಆ ಭೂಮಿಯಲ್ಲಿ ನಿಂತು ರೈತನ ಕಷ್ಟ ಸುಖಗಳಿಗೆ ಸ್ಪಂದಿಸಿ ಈ ಸದನದಲ್ಲಿ ತಮ್ಮ ಎಲ್ಲಾ ಅನಿಸಿಕೆಗಳನ್ನು ಮಾನ್ಯ ಮುಖ್ಯಮಂತ್ರಿಗಳನ್ನಾಗಲಿ, ಮಂತ್ರಿಗಳನ್ನಾಗಲಿ ಕೇಳಿ, ಮಾಡಬೇಕೆನ್ನುವ ಕಳಕಳಿಯನ್ನು ಇಟ್ಟುಕೊಂಡಿದಂತಹ ಒಬ್ಬ ಧೀಮಂತ ರೈತರ ನಾಯಕರು. ಯಾವುದೇ ಒಬ್ಬ ಮಂತ್ರಿಗಳು, ಶಾಸಕರು ಸಾಮಾನ್ಯವಾಗಿ ತಮ್ಮ ಜೀವನದಲ್ಲಿ ಸಮಾಜವನ್ನು ಅಪ್ಪಿಕೊಂಡು, ಸಮಾಜ ಸತ್ಸಂಪ್ರದಾಯಕ್ಕೆ ಹೆಚ್ಚಿನ ಒತ್ತು ಕೊಟ್ಟುಕೊಂಡು ಅವರ ರಾಜಕೀಯ ಜೀವನವನ್ನು ಮಾಡಿದಂತಹವರಲ್ಲಿ ಭೈರೇಗೌಡರು ಮೊಟ್ಟ ಮೊದಲನೆಯ ವ್ಯಕ್ತಿ ಎಂದು ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಮಾನ್ಯ

ಭೈರೇಗೌಡರು ಏನೊಂದು ಕೃಷಿ ಮಂತ್ರಿಗಳಾಗಿದ್ದಾಗ ಕೆಲಸ ಮಾಡಿದ್ದಾರೆಂದರೆ, ಯಾವುದಾದರೂ ಒಂದು ವಿಷಯ ಬಂದ ತಕ್ಷಣ ಕೂಡಲೇ ಅವರು ತನ್ನ ಅಧಿಕಾರಿಯನ್ನು ಕರೆದು ತಕ್ಷಣ ಸೂಚನೆಯನ್ನು ಕೊಟ್ಟು ತಪ್ಪಾಗಿದೆ ಸರಿ ಮಾಡಬೇಕು ಹಾಗೂ 24 ಗಂಟೆಯೊಳಗೆ ವರದಿ ಕೊಡಬೇಕೆಂದು ಕೇಳುವ ವಿಚಾರದಲ್ಲಿ ಮಾನ್ಯ ಭೈರೇಗೌಡರು ತಮ್ಮದೇ ಆದ ಸಂಪ್ರದಾಯವನ್ನು ಬೆಳೆಸಿ ಈ ಸದನಕ್ಕೆ ಕೊಟ್ಟು ಹೋಗಿದ್ದಾರೆ. ಇವತ್ತು ಮಾನ್ಯ ಭೈರೇಗೌಡರು ಇಲ್ಲೇ ಇದ್ದಾರೆ ಎಂದು ಅನ್ನಿಸುತ್ತದೆ, ಬೆಳಿಗ್ಗೆ ಅವರ ನಿಧನದ ಸುದ್ದಿಯನ್ನು ಕೇಳಿ ನನಗಂತೂ ತುಂಬಾ ದುಃಖವಾಯಿತು. ಮಾನ್ಯ ಮುಖ್ಯಮಂತ್ರಿಗಳು ಅನೇಕ ಸಾರಿ ನೀವು ಹೇಳಿದ ಕೆಲಸವನ್ನು ಭೈರೇಗೌಡರೇ ಮಾಡುತ್ತೇನೆಂದು ಹೇಳಿದ್ದಾರೆ. ಅವರ ಸಲಹೆ ಸೂಚನೆಗಳನ್ನು ಮಾನ್ಯ ಮುಖ್ಯಮಂತ್ರಿಗಳು ಸ್ವೀಕಾರ ಮಾಡಿದ್ದಾರೆ, ನಿಜವಾಗಿಯೂ ಮಾನ್ಯ ಭೈರೇಗೌಡರನ್ನು ಇವತ್ತು ಈ ಸದನದಲ್ಲಿ ಸ್ಮರಿಸುವುದಷ್ಟೇ ಅಲ್ಲ ನಮ್ಮೆಲ್ಲರ ಕುಟುಂಬಕ್ಕೂ ದೊಡ್ಡ ನಷ್ಟವಾಗಿದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಭೈರೇಗೌಡರ ಹೆಸರನ್ನು ಕೃಷಿ ತಳಿಗೆ ಇವತ್ತು ಇಡಬೇಕೆಂದು ಮಾನ್ಯ ಸದಸ್ಯರಾದ ಸಿಂಧ್ಯಾರವರು ಸಲಹೆ ಮಾಡಿದ್ದಾರೆ, ಆ ಪ್ರಕಾರ ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಮಂತ್ರಿಗಳು ಹಾಗೂ ಸದನದ ಎಲ್ಲಾ ಸದಸ್ಯರು ಒಟ್ಟಾಗಿ ಸೇರಿ ಅಂತಹ ಒಬ್ಬ ಧೀಮಂತ ರೈತ ನಾಯಕ ಹಾಗೂ ರೈತರ ಕಳಕಳಿಯುಳ್ಳ ಒಬ್ಬ ರಾಜಕಾರಣಿಯ ಬಗ್ಗೆ ಉತ್ತಮವಾದ ಹೆಸರನ್ನು ಉಳಿಸಲು ಕ್ರಮ ಕೈಗೊಳ್ಳಬೇಕು. ಬೆಳಿಗ್ಗೆ ಆದರೆ ರೈತರು ಭೈರೇಗೌಡರೆಂದು ಸ್ಮರಿಸಿಕೊಳ್ಳಬೇಕು. ಆ ರೀತಿಯಾಗಿ, ಅವರ ಹೆಸರಿಗೆ ತಕ್ಕಂತೆ ರೈತ ಸಮೂಹಕ್ಕೆ ಒಂದು ಕೆಲಸ ಮಾಡಿಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಇತರ ಸಚಿವರನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಭೈರೇಗೌಡರ ಮನೆಗೆ ಹೋದಾಗ, ಚೆನ್ನಿಗಪ್ಪ ಬಾಳೆಕಾಯಿಯನ್ನು ಈ ರೀತಿ ಬೆಳೆಯಬೇಕೆಂದು ಹೇಳುತ್ತಿದ್ದರು. ಇವತ್ತು 24 ಕೆ.ಜಿ. ತೂಕ ಬರುವಂತಹ ಏಲಕ್ಕಿ ಬಾಳೆ ಬೆಳೆದಿದ್ದೇವೆಂದು ತೋರಿಸಿದರು. ಅವರ ವ್ಯವಸಾಯದ ಭೂಮಿಯನ್ನು ನೋಡಿದಾಗ, ತೋಟವನ್ನು ಒಳ್ಳೆಯ ಅರಮನೆ ಇಟ್ಟಂತೆ ಮಾಡಿದ್ದಾರೆ. ಇಲ್ಲಿ ಕೃಷಿ ಸಂರಕ್ಷಣೆಯ ವಿಚಾರದಲ್ಲಿ ಸರ್ಕಾರಕ್ಕೆ ಒಂದು ಪ್ರಶ್ನೆ ಕೇಳಿದಾಗ, ಎದ್ದು ನಿಂತು ಕೊಂಡರು, ಆ ದಿವಸ ಉತ್ತರ ಬರಲಿಲ್ಲವೆಂದು ಮಾನ್ಯ ಸಭಾಧ್ಯಕ್ಷರೆ, ತಾವು ಅಪ್ಪಣೆ ಮಾಡಿದಿರಿ, ನಾನು ಹಾಗೂ ಅವರು ಕುಳಿತುಕೊಂಡೆವು. ಆಮೇಲೆ ಅವರು, ಉತ್ತಮವಾದ ಪ್ರಶ್ನೆಯನ್ನು ಕೇಳಿದೆ ಚೆನ್ನಿಗಪ್ಪ, ಸರ್ಕಾರಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೆ ಇದನ್ನು ಹೇಳಿ ಮಾಡಿಸಬೇಕೆಂದು ತಮ್ಮ ಕಳಕಳಿಯನ್ನು ಅವರು ವ್ಯಕ್ತಪಡಿಸಿದರು. ಅಂತಹ ರೈತರ ನಿಜವಾದ ನಾಯಕ, ರೈತರ ನಿಜವಾದ ಪ್ರಭು ಅವರು, ಅಂತಹವರನ್ನು ಕಳೆದುಕೊಂಡು ನಮಗೆಲ್ಲಾ ತುಂಬಾ ದುಃಖವಾಗಿದೆ, ಆ ದುಃಖವನ್ನು ಭರಿಸತಕ್ಕಂತಹ ಶಕ್ತಿಯನ್ನು ಪರಮಾತ್ಮ ಅವರ ಕುಟುಂಬಕ್ಕೆ ಕೊಡಲೆಂದು ವೈಯಕ್ತಿಕವಾಗಿ ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಇನ್ನು ಮುಂದೆ ದೇವರು ಯಾವ ಅಂತಹ ರಾಜಕಾರಣಿಯನ್ನು ಸಾಯಿಸುವಂತಹ ಕ್ರಮವನ್ನು ತೆಗೆದುಕೊಳ್ಳಬಾರದು, ನಾನು ಆ ದೇವರಲ್ಲಿಯೂ ಪ್ರಾರ್ಥನೆ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು 20 ಗಂಟೆ ಕೆಲಸ ಮಾಡುತ್ತಾರೆ, ಹಾಗೆಯೇ ಜನ ಸೇವೆ ಮಾಡುವಂತಹ ಜನರಿಗೆ ದೇವರು ಇಂತಹ ಕಷ್ಟವನ್ನು ಕೊಡಬಾರದೆಂದು ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಭೈರೇಗೌಡರ ಹೆಸರು ಅಮರವಾಗಿ ಉಳಿಯಲಿ ಅವರ ಹೆಸರಿನಲ್ಲಿ ನಾವೆಲ್ಲರೂ ಕೆಲಸ ಮಾಡೋಣವೆಂದು ದೇವರಲ್ಲಿ ಪ್ರಾರ್ಥನೆ ಮಾಡಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) : ಸನ್ಮಾನ್ಯ ಅಧ್ಯಕ್ಷರೆ, ನಮ್ಮೆಲ್ಲರ ಹಿರಿಯರು, ಒಳ್ಳೆಯ ಸಂಸದೀಯ ಪಟುಗಳಾದಂತಹ ಸನ್ಮಾನ್ಯ ಭೈರೇಗೌಡರ ನಿಧನದ ಬಗ್ಗೆ ಎಲ್ಲರೂ ಮಾತನಾಡಿದಂತೆ ತುಂಬಲಾರದ ಹಾನಿಯಾಗಿದೆ. ಹುಟ್ಟು ಆಕಸ್ಮಿಕ ಮರಣ ನಿಶ್ಚಿತ. ಹುಟ್ಟು ಸಾವಿನ ನಡುವೆ ನಾವೇನು ಮಾಡುತ್ತೇವೆ, ನಾವೇನು ಮಾಡಿ ಹೋಗುತ್ತೇವೆನ್ನುವುದೂ ಕೂಡ ನಮ್ಮ ಜೀವನದ ಕೊನೆಗಳಿಗೆಯಲ್ಲಿ ತೋರಿಸುತ್ತದೆ. ಶರಣನ್ನು ಮಸದಲ್ಲಿ ಕಾಣೆಂದು ಹೇಳುತ್ತಾರೆ. ಮನುಷ್ಯನಿಗೆ ಅಧಿಕಾರವಿದ್ದಾಗ ಎಲ್ಲರೂ. ಹೊಗಳುತ್ತಾರೆ, ಆತ ಹೋದ ನಂತರ ಆತ ಏನು ಮೌಲ್ಯಗಳನ್ನು ಬಿಟ್ಟು ಹೋಗಿರುತ್ತಾನೆ ಅವು ಶಾಶ್ವತವಾಗಿ ಉಳಿಯುತ್ತವೆ, ಆ ಮೌಲ್ಯಗಳನ್ನು ಜನರು ಶಾಶ್ವತವಾಗಿ ಉಳಿಸಿಕೊಂಡು ಹೋಗುತ್ತಾರೆ. ಅದಕ್ಕೇ ಚಿರಂಜೀವಿ ಎಂದು ಹೇಳುವುದು. ನಮ್ಮ ಮಧ್ಯದಲ್ಲಿ ಧೃವ ಇಲ್ಲ, ಆದರೂ ಕೂಡ ಧೃವ ಚಿರಂಜೀವಿ ಎಂದು ಹೇಳುತ್ತಾರೆ. ಹಾಗೆ ನಾವು ಬಿಟ್ಟುಹೋದಂಥ ಮೌಲ್ಯಗಳು ಚಿರಂಜೀವಿಯಾಗುತ್ತವೆ, ಗಾಂಧೀಜಿ ಚಿರಂಜೀವಿ ಹಾಗೆಯೇ ಭೈರೇಗೌಡರೂ ಕೂಡ ಕೃಷಿ ಪ್ರಶ್ನೆ ಬಂದಾಗ, ಬೇಸಾಯಗಾರರ ಪ್ರಶ್ನೆ ಬಂದಾಗ, ಹಳ್ಳಿಗರ ಪ್ರಶ್ನೆ ಬಂದಾಗ ಹಳ್ಳಿಗರ ಮಕ್ಕಳ ಪ್ರಶ್ನೆ ಬಂದಾಗ, ಅವರು ಹೋರಾಟ ಮಾಡಿದ, ಅವರು ಬಿಟ್ಟುಹೋದ ಮೌಲ್ಯಗಳು ಮಾತ್ರ ಶಾಶ್ವತವಾಗಿರುವುದರಿಂದ, ಅವರ ಹೆಸರು ಬಂದಾಗ ಅವರು ಚಿರಂಜೀವಿಯಾಗಿ ಉಳಿಯುತ್ತಾರೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಭೈರೇಗೌಡರು ಬಹುಶಃ ಆ ಕಡೆ ಸಚಿವರಾದಾಗ ಈ ಕಡೆ ಮುನಿಯಪ್ಪನವರು ವಿರೋಧಪಕ್ಷದಲ್ಲಿ ಕುಳಿತಿದ್ದರು, ನಾನು ಹಲವಾರು ಬಾರಿ ವಿನೋದಕ್ಕೆ ಭೈರೇಗೌಡರು ಎದ್ದ ಕೂಡಲೇ ಮುನಿಯಪ್ಪನವರ ಟೇಬಲ್ ತಗ್ಗು ಬೀಳುತ್ತದೆಂದು ಹೇಳುತ್ತಿದ್ದೆ. ಇಬ್ಬರಿಗೂ ಕೂಡ ವಾದವಿವಾದ ಆ ರೀತಿಯಾಗಿ ನಡೆಯುತ್ತಿತ್ತು; ಹೊರಗೆ ಹೋದ ಕೂಡಲೇ ಇಬ್ಬರು ನಗುತ್ತಾ ಹೋಗುತ್ತಿದ್ದರು. ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತೆ ಬೇಡ ಬೇಡ ಗೌಡರೆ, ಕೂಡ್ರಿ ಕೂಡ್ರಿ ಎಂದು ಬಯ್ಯುತ್ತಿದ್ದಿರಿ. ಆದರೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತಿರಲಿಲ್ಲ, ಏಕೆಂದರೆ ಅವರು ಅಂತಹ ಉತ್ತಮವಾದ ಮೌಲ್ಯಗಳನ್ನು, ಹಾಗೂ ಸಲಹೆಗಳನ್ನು ಅವರು ಕೊಡುತ್ತಿದ್ದರು. ಆದರೆ ತಾವು ಇಲ್ಲಿ ಎಲ್ಲರಿಗೂ ಸಮನಾಗಿ ಅವಕಾಶ ಮಾಡಿಕೊಡಬೇಕೆನ್ನುವ ದೃಷ್ಟಿಯಿಂದ ಹೇಳುತ್ತಿದ್ದೀರಿ ಅಷ್ಟೆ. ಸಂಸದೀಯಪಟು ಎಂದು ಹೆಸರು ಉಳಿಸಿಕೊಂಡು ಹೋಗಬೇಕಾದರೆ 5 ನಿಮಿಷ 3 ನಿಮಿಷ ಮಾತನಾಡಿ ಉಳಿಸಿಕೊಳ್ಳುವುದಕ್ಕಾಗುವುದಿಲ್ಲ. ಭೈರೇಗೌಡರಂತಹವರಿಗೆ ಎರಡು ಗಂಟೆ ಬೇಕಾಗುತ್ತದೆ. ಮೊನ್ನೆ ಮಾನ್ಯ ಸದಸ್ಯರಾದ ಆರಗ ಜ್ಞಾನೇಂದ್ರ ಮಾತನಾಡಬೇಕಾದಾಗ ಎರಡು ಗಂಟೆ ಮಾತನಾಡಿದರೂ ಇನ್ನೂ ಅವರ ಮಾತನಾಡುವುದು ಉಳಿಯಿತು, ಹಾಗೆಯೇ ಗುರುಸ್ವಾಮಿ; ಯುವಕರು ಚೆನ್ನಾಗಿ ಪ್ರತಿಪಾದನೆ ಮಾಡಿದರು. ಎಲ್ಲರಿಗೂ ಆದರ್ಶಪ್ರಾಯವಾಗಿದ್ದಂತಹ ಮಾನ್ಯ ಭೈರೇಗೌಡರು ನಿಜವಾಗಿಯೂ ತಾವು ಹೇಳಿದಂತೆ ಆ ಜಾಗ ತುಂಬುವುದು ಅಷ್ಟು ಹಗುರ ಇಲ್ಲ. ಬಹಳ ಕಷ್ಟವಿದೆ, ಸುಲಭವಾದ ಮಾತಲ್ಲ. ಬಹುಶಃ ನಮ್ಮಿಬ್ಬರಲ್ಲಿ ಬಹಳ ಆತ್ಮೀಯತೆ, ಇಬ್ಬರೂ ಒಂದೇ ಮಂತ್ರಿಮಂಡಲದಲ್ಲಿ ಕೆಲಸ ಮಾಡಿದವರು, ದುರ್ದೈವದಿಂದ ಎರಡು ವಿಚಾರಗಳಲ್ಲಿ ನಮ್ಮಿಬ್ಬರ ನಡುವೆ ಮನಸ್ತಾಪವಾಗುವ ಮಟ್ಟಕ್ಕೂ ಹೋಗಿತ್ತು, ನಾನು ಕೇಳುವುದಿಲ್ಲ, ಅವರು ಬಿಡುವುದಿಲ್ಲ; ಇಬ್ಬರದ್ದೂ ಅದೇ ವಾದವಾಗಿತ್ತು. ಕೋಲಾರ ಮಿಲ್ಕ್ ಯುನಿಯನ್‌ಗೆ ನಾಮಿನೇಷನ್ ಹಾಕಿಸಿಕೊಂಡು ಹೋಗಬೇಕೆಂದು ಅವರು, ಬರುವುದಿಲ್ಲವೆಂದು ನಾನು, ಮುನಿಯಪ್ಪನವರಿಗೆ ಇದು ಗೊತ್ತು. ಭಾರಿ ಜಗ್ಗಿ ಬೈದರು, ಬೇಕಾದ್ದು ಮಾಡಿದರು ಏನಾದರೂ

ಮಾಡುವುದಿಲ್ಲ, ತಪ್ಪಾಗುತ್ತದೆ, ಭೈರೇಗೌಡರೇ, ನೀವು ಹೇಗೆ ಕೆಲವು ಮೌಲ್ಯಗಳಿಗೆ ಅಂಟಿಕೊಂಡಿದ್ದಿರೋ ನಾನೂ ಕೂಡ ಕೆಲವು ಮೌಲ್ಯಗಳಿಗೆ ಅಂಟಿಕೊಂಡಿದ್ದೇನೆ, ದಯವಿಟ್ಟು ನನ್ನ ಮೇಲೆ ಆ ಬಗ್ಗೆ ಒತ್ತಡ ತರಬೇಡಿ ಎಂದು ಹೇಳಿದರೆ, ಕೊನೆಗೆ ನಾನು ಇಲ್ಲದ ದಿವಸ ಅವರು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಹಾಕಿಸಿಕೊಂಡು ಹೋಗಿದ್ದರು. ಅಷ್ಟಾದರೂ ಮತ್ತೆ ನಗುತ್ತಾ ಬಂದರು, ಎಸ್.ಎಸ್. ಪಾಟೀಲ್ ನೀನು ಹೇಳಿದೆಯಲ್ಲಾ, ಅದನ್ನು ಮಾಡಿಸಿದ್ದೇನೆ ನೋಡು ಅಂದರು. ನಾನು, ಮತ್ತೆ ಸ್ಟೇ ಬರುತ್ತದೆ ನೋಡಿ ಎಂದೆ. ಮಧ್ಯಾಹ್ನ ಬಂತು, ನಿನ್ನೆ ಮಾಡಿಸಿದ್ದೇಯಲ್ಲಾ ಎಂದು ಮತ್ತೆ ಹುಡುಗಾಟಿಕೆ ಮಾಡಿದರು. ಹಾಗೆ ಏನೇ ವಿರಸ ಬಂದರೂ ಕೂಡ ಅಷ್ಟೇ ಆತ್ಮೀಯತೆಯಿಂದ ಇದ್ದರು. ಯಾವುದನ್ನೂ ಮನಸ್ಸಿನಲ್ಲಿ ಇಟ್ಟುಕೊಳ್ಳುತ್ತಿರಲಿಲ್ಲ. ಇಂತಹ ಒಬ್ಬ ಆದರ್ಶರಾಜಕಾರಣಿ ಇಲ್ಲವೇ ಇಲ್ಲ. ನಾನು ಇವತ್ತು ಬೆಳಿಗ್ಗೆ ಕೇಳಿದಾಗ ಕಣ್ಣೀರು ಬಂತು ಅವರ ಕುಟುಂಬ ಅಳುವುದನ್ನು ಕೇಳಿ ಅಲ್ಲಿ ನಿಲ್ಲಲಿಕ್ಕಾಗಲಿಲ್ಲ, ಮಾತನಾಡುವುದಕ್ಕಾಗಲಿಲ್ಲ. ಬಹುಶಃ ನಾನು ಮೇಮಗಲ್‌ಗೆ ಹೋಗಿದ್ದೆ, ಅವಸರದಲ್ಲಿ ಹೋಗುವಾಗ ಕಾರನ್ನು ತೆಗೆದುಕೊಂಡು ಹೋಗಿದ್ದೆ, ಕ್ಷಮೆ ಕೇಳಿದೆ, ಏಕೆಂದರೆ ನನ್ನ ಹೆಸರಿನಲ್ಲಿ ಕಾರು ತಂದು ಬಿಟ್ಟಿದ್ದರು. ಕಾರನ್ನು ತೆಗೆದುಕೊಂಡು ಹೋದೆ, ನನ್ನದು ತಪ್ಪಾಗಿ ಬಿಟ್ಟಿತು. ಅವರ ಬಗ್ಗೆ ಮಾತನಾಡುವಾಗ, ನಾನು ಅವರ ಮನೆಯವರ ಬಗ್ಗೆ ಮಾತನಾಡಿದ್ದೆ, ನಾನು ಅವರ ಮನೆಯನ್ನೂ ನೋಡಿರಲಿಲ್ಲ, ಇಷ್ಟು ದಿವಸವಾದರೂ ಮನೆಗೆ ಕರೆದುಕೊಂಡು ಹೋಗಿದ್ದಿಲ್ಲ. ಅವರದೇ ಆದ ಪಾಳೆಗಾರರ ರೀತಿಯ ಕುಟುಂಬ, ಅವರದೇ ಆದ ಒಂದು ವ್ಯವಸ್ಥೆ ಅಲ್ಲಿ ಬೇರೆಯವರದ್ದು ಯಾರದ್ದೂ ಇಲ್ಲ, ಅವರದೇ ಮನೆ ಅವರದೇ ಹೊಲ, ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಂತೆ, ಒಬ್ಬ ಸಾಮಾನ್ಯ ರೈತನ ಮನೆ ಇರುವಷ್ಟಿದೆ. ಬಹುಶಃ ನಾವು ಮಂತ್ರಿಗಳು ಮಡದಿಯರನ್ನು ನೋಡಿದ್ದೇವೆ, ಯಾವಾಗಲಾದರೂ ಮಾತನಾಡಲು ಕುಳಿತಾಗ ಸಂತೋಷದಿಂದ ನನ್ನ ಹೆಂಡತಿ ಟಮೇಟೊ ಮಾರುವುದಕ್ಕೆ ಹೋದಳೆಂದು ಹೇಳುತ್ತಿದ್ದರು, ಮುದುಕಿ ತಲೆಮೇಲೆ ಬುಟ್ಟಿ ಇಟ್ಟುಕೊಂಡು ಹೋಗಿ ಮಾರಾಟ ಮಾಡುವುದು. ಇದನ್ನು ಹೇಳಿದರೆ ಆಶ್ಚರ್ಯವಾಗುತ್ತದೆ, ನಡೆದಂತಹ ಸಂಗತಿ ಇದು. ಆ ದಿವಸ ಮೇಮಗಲ್‌ನಲ್ಲಿ ಮಾತನಾಡುವಾಗ, ಇವರದೇನೂ ಇಲ್ಲಪ್ಪ ಅವರೆಲ್ಲಾ ಮಾಡಿ ಇವರನ್ನು ಇಲ್ಲಿ ಕುಳ್ಳಿರಿಸಿದ್ದಾರೆ, ಸುಮ್ಮನೆ ಇವರನ್ನು ಏತಕ್ಕೆ ಹೊಗಳುತ್ತೀರೆಂದು ಹೇಳಿದ್ದೆ. ನಾನು ಹೋಗುವುದರೊಳಗೇ ಅವರು ಹೇಳಿದರು, 'ಸಾವಿತ್ರಿ, ಪಾಟೀಲರು ನಿನ್ನ ಬಗ್ಗೆ ಭಾರೀ ಸಂತೋಷದಿಂದ ಮಾತನಾಡಿದರು' ಎಂದು. ಹಾಗೆ ಆ ದಂಪತಿಗಳು ಆದರ್ಶಮಯವಾದ ಜೀವನವನ್ನು ನಡೆಸುತ್ತಿದ್ದರು. ಎಲ್ಲರೂ ಹೇಳಿದ ಹಾಗೆ ಅವರು ತಮ್ಮ ಮಕ್ಕಳ ಲಗ್ನವನ್ನು ಬಹಳ ಸರಳ ರೀತಿಯಿಂದ ಮಾಡಿದರು. ಅವರನ್ನು ನಾನು ಕೇಳಿದೆ, ಮದುವೆಯನ್ನು ಇಷ್ಟೆಲ್ಲಾ ಸರಳ ರೀತಿಯಿಂದ ಮಾಡಿದಿರಿ, ಆದರೆ ಕಲ್ಯಾಣ ಮಂಟಪದಲ್ಲಿ ಏಕೆ ಮಾಡಿದಿರಿ? ಅದಕ್ಕೆ ಎಷ್ಟು ಹಣ ಕೊಟ್ಟಿರಿ? ಅದಕ್ಕೆ ಖರ್ಚಾಯಿತಲ್ಲಾ ಅಲ್ಲಿ ಏಕೆ ಮಾಡಿದಿರಿ ಎಂದು ನಾನು ಶುರು ಮಾಡಿದೆ.ಕೊನೆಗೆ ಅವರು ಹೇಳಿದರು, ಪಾಟೀಲರೇ, ನಾನು ಏನು ಮಾಡುವುದಪ್ಪಾ, ಮಗಳನ್ನು ಕೊಟ್ಟಿದ್ದೇನೆ, ಈ ವಿಷಯದಲ್ಲಿ ಬೀಗರು ಕೇಳುವುದಿಲ್ಲ, ಅದೊಂದು ವಿಷಯದಲ್ಲಿ ನಾನು ಸೋತಿದ್ದೇನೆ ಎಂದು ಹೇಳಿದರು. ಇಷ್ಟು ದಿವಸದಲ್ಲಿ ನಾನು ಸೋತಿದ್ದು ಇದರಲ್ಲೇ, ನಮ್ಮ ಬೀಗರು ಅಲ್ಲೇ ಮಾಡಿದರೆ ಸರಿ, ಇಲ್ಲದಿದ್ದರೆ ನಾವು ಕೇಳುವುದಿಲ್ಲ ಎಂದು ಹೇಳುತ್ತಿದ್ದಾರೆ, ನಾನೇನು ಮಾಡಲಿ, ಅದಕ್ಕಾಗಿ ಅಲ್ಲಿ ಮಾಡಿದೆ ಎಂದು ಹೇಳಿದರು. ಆದರೂ ಕೂಡ ಸರಳವಾದ ವಿವಾಹವನ್ನು ಮಾಡಿ ತೋರಿಸಿದರು.

ಇದು ನಮಗೆಲ್ಲರಿಗೂ ಆದರ್ಶ. ಲಗ್ನ ಮಾಡುವಾಗ ನಾವೆಲ್ಲರೂ ಖರ್ಚು ಮಾಡುವುದನ್ನು ನೋಡಬೇಕು. ನಾವು ಮಾಡುವ ಉದ್ಯೋಗವನ್ನು ನೋಡಿ ಜನರೆಲ್ಲಾ ಹಿಂದೆ ಬಯ್ಯುತ್ತಿರುತ್ತಾರೆ. ಆದರೂ ಕೂಡ ನಾವು ಹಾಗೇ ಮಾಡುತ್ತಿದ್ದೇವೆ. ಈ ಒಂದು ಹಿನ್ನಲೆಯಲ್ಲಿ ಅವರ ಇಂಥ ಕೆಲವು ಆದರ್ಶಗಳನ್ನು ನಾವು ನೋಡಬೇಕು. ಎಷ್ಟೋ ಸಲ ಇಲ್ಲಿರುವ ಕೆಲವರು ಒಮ್ಮೊಮ್ಮೆ ಈ ಬಗ್ಗೆ ಕೇಳಿದರೆ, ಅವರು ನಕ್ಕುಬಿಡುತ್ತಿದ್ದರು, ಆಯಿತಪ್ಪಾ, ನಿಮಗೆ ಮುಂದೆ ತಿಳಿಯುತ್ತದೆ ಎಂದು ಹೇಳುತ್ತಿದ್ದರು. ಈಗ ಅದು ನಮಗೆಲ್ಲಾ ತಿಳಿದಿದೆ, ಅದು ನಮಗೆ ಇವತ್ತೇ ಗೊತ್ತಾಯಿತು. ನಾಳೆ ನಾವು ಏನು ಮಾಡುವುದು ಎನ್ನುವ ವಿಚಾರಕ್ಕೆ ಬಿದ್ದಿದ್ದೇವೆ, ನಮ್ಮ ಪರಿಸ್ಥಿತಿಯೇನು? ಏನು ಮಾಡುವುದು? ಇಂಥ ಒಂದು ಆದರ್ಶ ಜೀವನವನ್ನು ನಡೆದಂಥ ನಮ್ಮ ಒಬ್ಬ ನಾಯಕರು ನಮ್ಮೆಲ್ಲರನ್ನೂ ಬಿಟ್ಟು ಅಗಲಿ ಹೋಗಿದ್ದಾರೆ. ಸಿಂಧ್ಯಾರವರು ಹೇಳಿದ ಹಾಗೆ, ಅವರ ಹೆಸರು ಉಳಿಯಬೇಕಾಗುತ್ತದೆ. ಆ ವಿಚಾರದಲ್ಲಿ ತಾವು ಏನು ತೀರ್ಮಾನ ತೆಗೆದುಕೊಳ್ಳುತ್ತೀರೋ, ಅದನ್ನು ತೆಗೆದುಕೊಳ್ಳಿ, ನಾನು ಬೇಡ ಎಂದು ಹೇಳುವುದಿಲ್ಲ. ನಾನೂ ಕೂಡ ಅದಕ್ಕೆ ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ನಾವ್ಯಾರೂ ಏನೂ ಮಾಡದಿದ್ದರೂ ಅವರ ಹೆಸರು ಶಾಶ್ವತವಾಗಿ ಇರುತ್ತದೆ. ಅಸೆಂಬ್ಲಿಯಲ್ಲಿ ರೈತರ ಪ್ರಶ್ನೆ, ಹಳ್ಳಿಗಾಡಿನ ಪ್ರಶ್ನೆ ಬಂದಾಗ ಅವರು ನೆನಪಾಗುತ್ತಾರೆ. ಸಿಂಧ್ಯಾರವರು ಹೇಳಿದ ಹಾಗೆ, ಹಳ್ಳಿಯವರಿಗೆ ಉದ್ಯೋಗದಲ್ಲಿ ಶೇಕಡಾ ಹತ್ತರಷ್ಟು ಮೀಸಲಿಡುವ ಪ್ರಶ್ನೆ ಬಂದಾಗ ಮೊದಲನೆಯದಾಗಿ ನಾವು ಬಂಗಾರಪ್ಪನವರನ್ನು ನೆನೆಸಿಕೊಳ್ಳುತ್ತೇನೆ. ಅವರೇ ಮೊದಲು ಮಾಡಿದವರು, ಹಳ್ಳಿಯವರಿಗೆ ಶೇಕಡಾ ಹದಿನೈದರಷ್ಟು ಕೊಟ್ಟು ಕೆಲವು ಹಳ್ಳಿಯ ಮಕ್ಕಳು ಅಪಾಯಿಂಟ್‌ಮೆಂಟ್ ಆಗುವ ಹಾಗೆ ಮಾಡಿದ್ದರು. ಈ ವಿಚಾರ ಅಸೆಂಬ್ಲಿಯಲ್ಲಿ ಬಂದಾಗ, ಶೇಕಡಾ ಹದಿನೈದರಷ್ಟು ಎಂದು ನಾನು, ಉಳಿದವರು ಹದಿನೈದು ಮಾರ್ಕ್ಸ್ ಎಂದು ವಾದ ಮಾಡುತ್ತಿದ್ದರು. ಇಲ್ಲಪ್ಪಾ, ಅವರು ಹದಿನೈದು ಪರ್ಸ್‌ಂಟ್ ಎಂದು ಕೊಟ್ಟಿದ್ದರು ಎಂದು ಕಡೆಗೆ ನಾನು ಹೋಗಿ ಧಾರವಾಡದಲ್ಲಿ ಆದ ಶಿಕ್ಷಕರ ಅಪಾಯಿಂಟ್‌ಮೆಂಟ್ ಲಿಸ್ಟನ್ನು ತೆಗೆದುಕೊಂಡು ಬಂದು ತೋರಿಸಿದೆ. ಇಲ್ಲದಿದ್ದರೆ ಸಿಟಿ ಮಂದಿಯೇ ಬೇರೆ, ಹಳ್ಳಿಯ ಮಂದಿಯೇ ಬೇರೆ ಆಗಿಬಿಡುತ್ತಿದ್ದೆವು. ನಿಮ್ಮಲ್ಲಿ ಅದು ಆಗುತ್ತಿದೆ. ಹಳ್ಳಿಯವರು ಹಳ್ಳಿಯರಾಗಿಯೇ ಇರುತ್ತಾರೆ, ಸಿಟಿಯವರು ಸಿಟಿಯಲ್ಲೇ ಇರುತ್ತಾರೆ. ಕೊನೆಗೆ ಈ ವಿಷಯದಲ್ಲಿ ರಾಜಿ ಮಾಡಿಕೊಂಡು ಹತ್ತು ಪರ್ಸೆಂಟಿಗೆ ಬಂದೆವು. ಅದಕ್ಕೆ ಮೂಲ ಕಾರಣರು ಯಾರು ಎಂದರೆ ಭೈರೇಗೌಡರು. ಹೀಗಾಗಿ ಅವರನ್ನು ನೆನಸಿಕೊಳ್ಳಬೇಕಾಗುತ್ತದೆ. ಆ ಕಾರಣದಿಂದ ಅವರು ಇಂದೂ ಸಹ ಶಾಶ್ವತವಾಗಿ ನಮ್ಮ ಮನದಲ್ಲಿ ಉಳಿದಿದ್ದಾರೆ, ಈ ಸದನದಲ್ಲಿ ಉಳಿದಿದ್ದಾರೆ, ಈ ರಾಜ್ಯದಲ್ಲಿ ಉಳಿದಿದ್ದಾರೆ, ಈ ರಾಷ್ಟ್ರದಲ್ಲಿ ಉಳಿದಿದ್ದಾರೆ. ರೈತರ ಜೀವನದಲ್ಲಿ ಹಾಸುಹೊಕ್ಕಾಗಿದ್ದಂಥ ಒಬ್ಬ ರೈತ ನಾಯಕರು ಹೋದರು. ರೈತರ ಪರವಾಗಿ ಮಾತನಾಡುವುದು ಬಹಳ ಕಷ್ಟ. ಇರುವವರಲ್ಲಿ ಬಹಳ ಜನ ಮಾತನಾಡುತ್ತಾರೆ, ಆದರೆ ಹಾಗೆ ಇರುವುದು ಬಹಳ ಕಷ್ಟ. ನಿನ್ನೆ ವೆ.ಕೆ. ರಾಮಯ್ಯನವರು ಮಾತನಾಡುವಾಗ ನಾವು ಇಲ್ಲಿ ಮಾತನಾಡಿಕೊಳ್ಳುತ್ತಿದ್ದೆವು. ಏನು ಮಾಡುವುದು? ಇವತ್ತು ದುರ್ದೈವದಿಂದ ನಮ್ಮ ನಾಯಕರು ಇಲ್ಲಿ ಇಲ್ಲ, ಇದ್ದಿದ್ದರೆ ಇಬ್ಬರಿಗೂ ಶುರುವಾಗುತ್ತಿತ್ತು ಎಂದು ಆಗ ತಮಗೆ ಬಹಳ ಕಷ್ಟಕ್ಕೆ ಬರುತ್ತಿತ್ತು. ತಾಸುಗಟ್ಟಳೆ ಇಬ್ಬರೂ ಬಿಡುತ್ತಿರಲಿಲ್ಲ. ಅವರು ಇವರನ್ನು ತಿವಿಯುತ್ತಿದ್ದರು, ಇವರೂ ಬಿಡುತ್ತಿರಲಿಲ್ಲ. ಹಿಂದೆ ನಾವೂ ಕೂಡ ನೋಡುತ್ತಿದ್ದೆವು. ನಾವು ಮಂತ್ರಿಗಳಾಗಿ ಆ ಕಡೆ ಇದ್ದಾಗ, ಕೆಲವರು ಈ ಕಡೆ ಇದ್ದರು, ಇಬ್ಬರು ಮೂವರು ಮಾತನಾಡುವಾಗ ನಾವು ಹೊರಗೆ ಎಲ್ಲಿದ್ದರೂ ಓಡಿ ಬಂದು ಇಲ್ಲಿ ಕುಳಿತುಕೊಳ್ಳುತ್ತಿದ್ದೆವು. ಅಂಥ

ಸಂಸದೀಯ ಪಟುತ್ವ ಇರುವಂಥ ಕೆಲವು ಜನ ಈ ಅಸೆಂಬ್ಲಿಯಲ್ಲಿ ಇರಬೇಕಾಗುತ್ತದೆ. ಅಂಥ ಒಂದು ವರ್ಗಕ್ಕೆ ಸೇರಿದ ಭೈರೇಗೌಡರು ಅಗಲಿ ಹೋದಂಥಾದ್ದು ನಿಜವಾಗಿಯೂ ಇಲ್ಲಿರುವಂಥ ಯುವ ಪೀಳಿಗೆಗೆ ತುಂಬಲಾರದಂಥ ಹಾನಿ ಎನ್ನುವ ನನ್ನ ಭಾವನೆಯನ್ನು ಹೇಳುತ್ತೇನೆ. ಅದೇ ರೀತಿ ಅವರ ನಿಧನದಿಂದ ನಮ್ಮ ಪಕ್ಷಕ್ಕೆ, ಈ ರಾಜ್ಯಕ್ಕೆ ತುಂಬಲಾರದಂಥ ಹಾನಿಯಾಗಿದೆ, ಅಂಥ ಒಂದು ಹಾನಿಯನ್ನು, ಶಕ್ತಿಯನ್ನು ತುಂಬುವಂಥ ಒಬ್ಬ ವ್ಯಕ್ತಿ ಇಲ್ಲಿ ಬಂದು ಕೂರುವಂಥ ಅವಕಾಶವನ್ನು ಆ ಪರಮಾತ್ಮನು ದಯಪಾಲಿಸಲಿ ಎಂದು ಕೇಳಿಕೊಂಡು, ಅವರ ಕುಟುಂಬದವರಿಗೆ, ಬಂಧು–ಬಳಗದವರಿಗೆ, ಹಿಂಬಾಲಕಲೆಲ್ಲರಿಗೂ ಕೂಡ, ಅವರ ಈ ಒಂದು ಅಗಲಿಕೆಯ ನೋವನ್ನು ತಾಳಿಕೊಳ್ಳುವಂಥ ಶಕ್ತಿಯನ್ನು ದಯಾಮಯನಾದ ಆ ಭಗವಂತನು ಕೊಡಲೆಂದು ಪ್ರಾರ್ಥಿಸಿ, ನಾನೂ ಕೂಡ ವೈಯಕ್ತಿಕವಾಗಿ ಅವರ ಆತ್ಮಕ್ಕೆ ಭಗವಂತ ಶಾಂತಿಯನ್ನು ಕೊಡಲಿ ಎಂದು ಪ್ರಾರ್ಥಿಸಿ, ತಾವು ತಂದಿರುವ ಈ ಸೂಚನೆಯನ್ನು ಬೆಂಬಲಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

+ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು):– ಮಾನ್ಯ ಅಧ್ಯಕ್ಷರೇ, ಇಂದು ಬೆಳಿಗ್ಗೆ ಸುಮಾರೂ ಅರೂಮುಕ್ಕಾಲು ಗಂಟೆಗೆ ಸ್ನೇಹಿತರು ಫೋನ್ ಮಾಡಿ ಭೈರೇಗೌಡರು ನಿಧನರಾಗಿರುವ ಸುದ್ಧಿಯನ್ನು ತಿಳಿಸಿದರು. ನಮ್ಮ ಮುನಿಯಪ್ಪನವರಿಗೆ ಆದಂತೆ, ನನಗೂ ಕೂಡ ಈ ಸುದ್ಧಿಯಲ್ಲಿ ಏನೋ ವ್ಯತ್ಯಾಸವಿರಬೇಕು ಎಂದು ಅನ್ನಿಸಿತು. ಆದರೆ ಟಿ.ವಿ. ಆನ್ ಮಾಡಿದಾಗ, ಉದಯ ಟಿ.ವಿ.ಯಲ್ಲಿ ಈ ವಿಚಾರ ಬರುತ್ತಿತ್ತು. ನಂತರ ಮುಖ್ಯಮಂತ್ರಿಯವರ ಮನೆಗೆ ಫೋನ್ ಮಾಡಿ ಕನ್‌ಫರ್ಮ್ ಮಾಡಿಕೊಂಡೆ. ಅವರ ಸಿಬ್ಬಂದಿಯವರಿಗೂ ಮೆಸೇಜ್ ಬಂದಿತ್ತು. ಅವರ ಸಾವನ್ನು ನೋಡಿದರೆ ನನಗೆ ದತ್ತಲರಿ ಮಹಾರಾಜರು ಹೇಳಿದ ಒಂದು ಮಾತು ನೆನಪಾಗುತ್ತದೆ. ಆತ ತನ್ನ ಮಂತ್ರಿಗಳನ್ನು ಮತ್ತು ಮಕ್ಕಳನ್ನು ಕೂಡಿಸಿಕೊಂಡು ಒಂದು ಕಡೆ ಏನು ಹೇಳುತ್ತಾನೆ ಎಂದರೆ, "ಕ್ಷಣಂ ಚಿತ್ತಂ, ಕ್ಷಣಂ ವಿತ್ತಂ, ಕ್ಷಣಂ ಜೀವನ ಮೇವಚ, ಯಮಸ್ಯ ಕರುಣಾನಾಸ್ತಿ, ತಸ್ಮಾ ಜಾಗೃತಾ, ಜಾಗೃತಾ, ಜಾಗೃತಾ" ಎಂದು ಹೇಳುತ್ತಾನೆ. ಅಂದರೆ ಮನಸ್ಸು ಚಂಚಲವಂತೆ, ಸಂಪತ್ತೂ ಚಂಚಲವಂತೆ, ಬದುಕು ಶಾಶ್ವತವಲ್ಲವಂತೆ, ಯಮ ಯಾವ ಕಾರಣಕ್ಕೂ ಕರುಣೆ ತೋರಿಸುವುದಿಲ್ಲವಂತೆ. ನಾನು ಯಾರಿಗಾದರೂ ಒಬ್ಬರಿಗೆ ದಾನ ಮಾಡಬೇಕು, ಹತ್ತು ರೂಪಾಯಿ ಕೊಡಬೇಕು ಎಂದು ಹೊರಟರೆ, ಅವರು ಬಂದು ಕೇಳಿದಾಗ, ಜೇಬಿಗೆ ಕೈಹಾಕಿ ವಾಪಸ್ಸು ಬರುವಷ್ಟರಲ್ಲಿ, ಅವನಿಗೆ ಹತ್ತು ರೂಪಾಯಿ ಏಕೆ ಕೊಡಬೇಕು, ಬರೀ ಐದು ರೂಪಾಯಿ ಕೊಟ್ಟರೆ ಸಾಕು ಎನ್ನುವಷ್ಟು ಮನಸ್ಸು ಚಂಚಲವಾಗುತ್ತದಂತೆ. ಹೀಗೆ ಹಣ ಕೂಡ ಚಂಚಲವಾಗುತ್ತದೆ. ಹಾಗೆ ಜೀವನವೂ ಸಹ, ಯಾರು ಯಾವತ್ತು ಇರುತ್ತಾರೆ, ಹೇಗೆ ಇರುತ್ತಾರೆ, ಎಷ್ಟು ದಿನ ಇರುತ್ತಾರೆ ಎಂದು ಹೇಳಲು ಸಾಧ್ಯವಿಲ್ಲ, ನೀನು ಏನಾದರೂ ಸಾಧನೆ ಮಾಡುವುದಾದರೆ ಜಾಗೃತನಾಗಿ ಮಾಡು, ಸಾಧನೆಯನ್ನು ಕೂಡಲೇ ಮಾಡು ಎನ್ನುವುದು ದತ್ತಲರಿ ಮಹಾರಾಜ ಹೇಳಿದಂಥ ಮಾತು. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಕಳೆದ ಒಂದು ವರ್ಷದಿಂದ ಬಹಳ ಹತ್ತಿರದಲ್ಲಿ ಅನೇಕ ವಿಚಾರಗಳಲ್ಲಿ ನಾನು ಅವರ ಜೊತೆ ಸಂಪರ್ಕವನ್ನು ಇಟ್ಟುಕೊಂಡಿದ್ದೆ. ನಮ್ಮ ಅವರ ಮೊದಲ ಭೇಟಿ ಒಲಂಪಿಕೆ ಅಸೋಸಿಯೇಷನ್‌ನಿಂದ ಆಯಿತು. ನಾನು ಅಲ್ಲಿ ಒಬ್ಬ ಸದಸ್ಯನಾದಂಥ ಸಂದರ್ಭದಲ್ಲಿ, ರಾಜಕೀಯವನ್ನು ಹೊರತುಪಡಿಸಿ, ಸುಮಾರು 10–15 ವರ್ಷಗಳ ಹಿಂದೆ ನಮಗೂ ಅವರಿಗೂ ಸಂಪರ್ಕ ಬೆಳೆದಿತ್ತು. ಅವರಿಗೆ ಧರ್ಮದ ಬಗ್ಗೆ, ಜ್ಯೋತಿಷ್ಯದ ಬಗ್ಗೆ, ಗುಳಿಗೆಕಾಲದ ಬಗ್ಗೆ, ರಾಹುಕಾಲದ ಬಗ್ಗೆ, ಅಮಾವಸ್ಯೆ, ಹುಣ್ಣಿಮೆಗೆ ಯಾವುದರ ಬಗ್ಗೆಯೂ ಅವರಿಗೆ ನಂಬಿಕೆ ಕಾಣುತ್ತಿರಲಿಲ್ಲ. ಅದರೂ

ಕೂಡ ಮೊನ್ನೆ ನಾಗಮಂಗಲದಲ್ಲಿ ಯಾವುದೋ ಒಂದು ಧರ್ಮಪೀಠದ ರಕ್ಷಣೆಯ ವಿಚಾರದಲ್ಲಿ ನಾನು ಮತ್ತು ಅನೇಕ ಸ್ನೇಹಿತರುಗಳಾದ ಬಿ.ಕೆ.ಚಂದ್ರಶೇಖರ್‌ರವರು, ನಾಗೇಗೌಡರು, ಭೈರೇಗೌಡರು, ರಾಮಚಂದ್ರಗೌಡರು ಎಲ್ಲರೂ ಪಕ್ಷಾತೀತವಾಗಿ ಅಲ್ಲಿಗೆ ಭೇಟಿ ಕೊಟ್ಟಂಥ ಸಂದರ್ಭದಲ್ಲಿ ಅಲ್ಲಿ ವಿಚಾರಧಾರೆ ಮತ್ತೊಂದು ಎಲ್ಲವನ್ನೂ ಮಾತನಾಡಿದ ಮೇಲೆ ಅವರು ಇದ್ದಕ್ಕಿದ್ದ ಹಾಗೆ ಒಂದು ದೇವಸ್ಥಾನಕ್ಕೆ ನುಗ್ಗಿಬಿಟ್ಟರು. ಚೆಲುವರಾಯಸ್ವಾಮಿ ದೇವಸ್ಥಾನವೆಂದು ಕಾಣುತ್ತದೆ. ಅದೊಂದು ದೊಡ್ಡ ದೇವಸ್ಥಾನ. ಅಲ್ಲಿಗೆ ಭೇಟಿ ಕೊಟ್ಟರು. ನಾವು ಅಲ್ಲಿ ಒಂದು ಕಡೆ ಕಾಫಿಗೆ ಹೋಗಬೇಕಾಗಿತ್ತು. ನಮ್ಮ ವಾಹನಗಳೆಲ್ಲಾ ಹೊರಟವು. ಭೈರೇಗೌಡರು ಎಲ್ಲಿ ಎಂದು ಹುಡುಕಿದರು ಅವರು ದೇವಸ್ಥಾನದಲ್ಲಿದ್ದರು. ನಮಗೆ ನಂಬಲಿಕ್ಕೆ ಸಾಧ್ಯವಾಗಲೇ ಇಲ್ಲ. ಏಕೆಂದರೆ ಅವರು ಯಾವತ್ತೂ ದೇವಸ್ಥಾನಕ್ಕೆ ಹೋದವರೇ ಅಲ್ಲ. ಅಂಥವರು ಇದ್ದಕ್ಕಿದ್ದ ಹಾಗೆ ದೇವಸ್ಥಾನಕ್ಕೆ ಹೋಗಿ, ಸುಮಾರು ಅರ್ಧ ಗಂಟೆಯ ಕಾಲ ಆ ದೇವಸ್ಥಾನವನ್ನು ಪರೀಕ್ಷೆ ಮಾಡಿ ತಡವಾಗಿ ಬಂದರು. ಆಗ ನಾನು ಅವರನ್ನು ಕೇಳಿದೆ, ನಿಮಗೆ ದೇವಸ್ಥಾನ ಇವುಗಳಲ್ಲೆಲ್ಲಾ ನಂಬಿಕೆ ಇಲ್ಲ, ಇಲ್ಲಿಗೆ ಹೋಗಿದ್ದೀರಿ, ಏನಿದು ಎಂದು ಕೇಳಿದಾಗ, ಇದರ ವೈಭವ ಇವುಗಳನ್ನೆಲ್ಲಾ ನೋಡಿ ನನ್ನ ಮನಸ್ಸಿಗೆ ' ಏನೋ ಒಂದು ಭಾವನೆ ಬಂತು, ನಾನು ಒಳಗೆ ಹೋಗಿ ಇವುಗಳನ್ನೆಲ್ಲಾವನ್ನೂ ನೋಡಿದೆ, ನೀನೂ ಒಳಗಡೆ ಬರಬೇಕಾಗಿತ್ತು, ಇದರಲ್ಲಿ ಪ್ರಾಚೀನ ಕಾಲದ ಕೆಲವು ವಿಚಾರಗಳು ತಿಳಿದುಕೊಳ್ಳುವುದು ಇವೆ, ಎಂದು ಹೇಳಿ ಹೇಳಿದರು. ನಾವು ಪ್ರವಾಸ ಮಾಡಿಓ 2-3 ಗಂಟೆಗಳ ಕಾಲದಲ್ಲಿ ಬೇಕಾದಷ್ಟು ವಿಚಾರಗಳನ್ನು ಚರ್ಚೆ ಮಾಡಿದೆವು. ಆಗ ಅವರು ಹೇಳಿದರು, ನಾವು ಸಾಧನೆ ಮಾಡಬೇಕಾದುದು ಬಹಳ ಇದೆ, ಸಾಧನೆ ಮಾಡುವಂಥ ಸಂಧರ್ಭದಲ್ಲಿ ಬೇಕಾದಷ್ಟು ಬರುತ್ತದೆ, ಆಗ ನಾವು ಇಟ್ಟುಕೊಂಡಿರುವ ನೀತಿ, ತತ್ವ, ಸಿದ್ಧಾಂತಗಳನ್ನು ಯಾವುದೇ ಕಾರಣಕ್ಕೂ ಮಾರಿಕೊಳ್ಳಬಾರದು, ಆಗ ಮಾತ್ರ ನಾವು ಏನಾದರೂ ಸಾಧನೆ ಮಾಡಲು ಸಾಧ್ಯ ಎಂದು ಹೇಳಿದರು. ನಾನು ಅವರಿಗೆ ಒಂದು ಚಿಕ್ಕ ಗುಟ್ಟನ್ನು ಹೇಳಬೇಕಲ್ಲಾ ಎಂದು ಕೇಳಿದೆ. ಏನದು ಎಂದು ಕೇಳಿದರು. ನಿಮ್ಮ ಜಿಲ್ಲೆಯಲ್ಲಿ, ನಿಮ್ಮ ಪಕ್ಷದಲ್ಲಿ ಎಂಥೆಂಥವರಿಗೋ 'ಓಡಾಡಲು ಅವಕಾಶ ಮಾಡಿಕೊಡಲಿಲ್ಲ ನೀವು. ಬೇರೆಯವರಲ್ಲಿ ನಿಮ್ಮ ಜಿಲ್ಲೆಗೆ ಕಾಲಿಡಬೇಕು ಎಂದು ಹೊರಟರು. ಆದರೆ ನೀವು ಮಾತ್ರ ಅವಕಾಶ ಕೊಡಲಿಲ್ಲವಲ್ಲಾ, ಏನಿದು ಎಂದು ಕೇಳಿದೆ. ಅದಕ್ಕೆ ಅವರು ಹೇಳಿದರು, ನಾವು ರಾಜ್ಯ ಆಳುವುದು ಬೇರೆ. ಅದಕ್ಕೂ ಮೊದಲು ನಮ್ಮ ಮನೆಯನ್ನು ನಾವು ಸರಿಮಾಡಿಕೊಳ್ಳಬೇಕು. ನಾವು ಯಾವುದಾದರೂ ಒಂದು ಜವಾಬ್ದಾರಿಯುತ ಸ್ಥಾನದಲ್ಲಿರಬೇಕಾದರೆ ಮೊದಲು ನಮ್ಮ ಮನೆ, ನಮ್ಮ ಪರಿಸರ, ನಮ್ಮ ಸಂಸಾರ, ನಮ್ಮ ಜಿಲ್ಲೆ ಎಂದು ಮಾಡಿಕೊಂಡಾಗ ಮಾತ್ರ ನಾವು ಹೊರಗಡೆ ಒಂದು ಆದರ್ಶ ಜೀವನವನ್ನು ಮಾಡಲು ಸಾಧ್ಯ. ಆದ್ದರಿಂದ, ಯಾವುದಾದರೂ ಜವಾಬ್ದಾರಿಯುತ ಸ್ಥಾನಕ್ಕೆ ಹೆಜ್ಜೆ ಇಡಬೇಕು ಎಂದರೆ, ಯಾರ ಮೇಲಾದರೂ ಹೋರಾಟ ಮಾಡಬೇಕು ಎಂದರೆ ಅದಕ್ಕೂ ಮೊದಲು ನನ್ನ ಮನೆ ಬಿಗಿಯಾಗಿರಬೇಕು. ಅದಕ್ಕೋಸ್ಕರ ನಾನು ಮತ್ತು ನಮ್ಮ ಸ್ನೇಹಿತರಲ್ಲಿ ವೈಯಕ್ತಿಕವಾಗಿ 'ಏನೇ ಭಿನ್ನಾಭಿಪ್ರಾಯಗಳಿದ್ದರೂ ಕೂಡ ಒಂದು ಸಿದ್ಧಾಂತದ ಅಡಿಯಲ್ಲಿ ನಾನು ಜೊತೆಯಲ್ಲಿ ಕೆಲಸ ಮಾಡುತ್ತೇನೆ ಎನ್ನುವ ವಿಚಾರವನ್ನು ಅವರು ನನಗೆ ಹೇಳಿದ್ದರು. ನಂತರ ರಾಮನಗರಕ್ಕೆ ಬಂದರು. ಅಲ್ಲಿ ಒಂದು ಭಾಷಣವಾಯಿತು. ಬಹುಶಃ ಸಿ.ಎಂ.ಲಿಂಗಪ್ಪನವರು ಅದನ್ನು ರೆಕಾರ್ಡ್ ಮಾಡಿಸಿದ್ದಾರೇನೋ ನನಗೆ ಗೊತ್ತಿಲ್ಲ. ಬಹಳ ಅದ್ಭುತವಾದ, ಧಾರ್ಮಿಕವಾದ ಒಂದು ಭಾಷಣವನ್ನು ಅಲ್ಲಿ ಮಾಡಿದರು. ಮಾಡಿ ಆದ ಮೇಲೆ ನಾನು ಕೇಳಿದೆ, ಅಸೆಂಬ್ಲಿಯಲ್ಲಿ ನೋಡಿದರೆ ಆ ರೀತಿ ಮಾತನಾಡುತ್ತೀರಿ, ಇಲ್ಲಿ ನೋಡಿದರೆ ಹೀಗೆ, ಇದರ

ಉದ್ದೇಶವೇನು. ಇದರ ಅರ್ಥ ನೋಡಿದರೆ ನೀವು ಯಾವುದೋ ಒಂದು ದಿಕ್ಕಿಗೆ ಹೋಗುತ್ತಿದ್ದೀರಲ್ಲ ಏನಿದು ಗೌಡರೇ ಎಂದು ನಾನು ಮತ್ತು ಸ್ನೇಹಿತರು ಕೇಳಿದಾಗ, ಅವರು ಒಂದು ಅಂಶವನ್ನು ಕೋಟ್ ಮಾಡಿ ನನಗೆ ಹೇಳಿದರು. ಅದನ್ನು ನಾನು ಒಂದು ಚೀಟಿಯಲ್ಲಿ ಬರೆದಿಟ್ಟುಕೊಂಡಿದ್ದೇನೆ. ಕೆಲವರು ಯಾವುದೋ ಒಂದು ವೈಯಕ್ತಿಕವಾದ ಕೆಲವು ಪಕ್ಷದ ಮತ್ತು ಸಮಾಜದ ಒಂದು ಘಟನೆ, ಯಾವುದೋ ಒಂದು ಮಠದ ಸಾಧನೆ ವಿಚಾರಕ್ಕೆ ಬಂದಾಗ ಅವರು ಒಂದು ಕಡೆ ನನಗೆ ಹೇಳಿದರು. ಅವಾಗ ಒಂದು ಚೀಟಿಯಲ್ಲಿ ಅದನ್ನು ಬರೆದು ಇಟ್ಟುಕೊಂಡಿದ್ದೆ. ಇವತ್ತು ಆ ಪುಸ್ತಕ ತೆಗೆದು ಬರೆದುಕೊಂಡು ಇಲ್ಲಿಗೆ ಬಂದಿದ್ದೇನೆ. "some men succeed by what they know, some by what they do, few by what they are, But why not to become a man of success by rather than a man of values". ಹಾಗೆ ನೀವು ಏನಾದರೂ ಒಂದು ಸಾಧನೆಯನ್ನು ಮಾಡಬೇಕಾದರೆ ಸಕ್ಸಸ್ ಆಗುತ್ತೇನೊ ಅಥವಾ ಬಿಡುತ್ತೇನೊ ಎನ್ನುವುದು ಅಲ್ಲ, ನಿನ್ನ ವಾಲ್ಯೂ ಅನ್ನು ನೀನು ಕಾಪಾಡಿಕೊಂಡು ಹೋಗು ಅದೇ, ಸಾಕು ಎಂದು ನನಗೆ ಹೇಳಿಕೊಟ್ಟಂಥ ಕೊನೆಯ ಹಿತವಚನ. ಕಳೆದ 15 ದಿನಗಳಲ್ಲಿ ನಾನು 3–4 ಸಾರಿ ಅವರಿಗೆ ಸಂಪರ್ಕವನ್ನು ಮಾಡಿದ್ದೆ, ಒಂದು ವಾರದ ಹಿಂದೆ ಅವರಿಗೆ ಫೋನ್ ಮಾಡಿದಾಗ– ಎಲ್ಲೋ ಜಮೀನು ಕಡೆ ಹೋಗಿದ್ದಾರೆ, ಎಂದು ಅಲ್ಲಿ ಹೇಳಿದರು, ಅವರಿಗೆ ಫೋನ್‌ನಲ್ಲಿ ಸಂಪರ್ಕ ಮಾಡಬೇಕಾಗಿತ್ತು . ತಕ್ಷಣ ಯಾರೋ ನನ್ನ ಪಕ್ಕದಲ್ಲಿ ಇದ್ದಂಥ ಸ್ನೇಹಿತರಿಗೆ ಅವರ ಹತ್ತಿರ ಹೋಗಿ ಬನ್ನಿ ಎಂದು ಹೇಳಿದೆ, ಅವರು ಹೋಗಿ ವಾಪಸ್ಸು ಬಂದು–ಅಲ್ಲಿ ಅವರು ವ್ಯವಸಾಯ ಮಾಡುತ್ತಿದ್ದಾರೆ. ಎಂದು ನನಗೆ ಹೇಳಿದರು. ಈ ಒಂದು 15 ದಿನಗಳಲ್ಲಿ ವ್ಯವಸಾಯ ಮಾಡುತ್ತಿದ್ದಾರೆ, ಬಿತ್ತನೆ ಆಗುತ್ತಿದೆ, ಅದನ್ನು ನೋಡಿಕೊಂಡು ಅವರು ಮಾರ್ಗದರ್ಶನವನ್ನು ಕೊಡುತ್ತಿದ್ದಾರೆ, ಅಂದರೆ ರಾಜಕಾರಣದಲ್ಲಿ ಇಷ್ಟು ದೊಡ್ಡ ಹೆಸರು ಇಟ್ಟುಕೊಂಡು ತನ್ನ ಜೀವನದಲ್ಲಿ ಇವತ್ತೂ ಕೂಡ ವ್ಯವಸಾಯದಲ್ಲಿ ಪಾಲ್ಗೊಂಡು ತನ್ನ ವ್ಯಕ್ತಿತ್ವವನ್ನು ಮಧ್ಯೆ ಸೇರಿಸಿಕೊಂಡಿದ್ದರಲ್ಲಾ ಈ ವ್ಯವಸಾಯಕ್ಕೆ ಅಂದಾಗ ನಿಜವಾಗಿಯೂ ಇಂಥ ಒಂದು ಆದರ್ಶದ ಬದುಕು ನಮ್ಮಂಥ ಯುವಕರಿಗೆ ದಾರಿದೀಪವಾಗಬೇಕು, ಅವರು ಯಾವ ರೀತಿಯಾಗಿ ನಡೆದುಕೊಂಡು ಬಂದು ಶುದ್ಧವಾದಂಥ ಜೀವನವನ್ನು ಮಾಡಿಕೊಂಡು ಬರುತ್ತಿದ್ದರು ಎನ್ನುವುದನ್ನು ನೋಡಿದಾಗ ನಾವೆಲ್ಲಾ ಅವರಿಂದ ಕಲಿಯಬೇಕಾದದ್ದು ಬಹಳ ವಿಚಾರ ಇದೆ. ಇನ್ನೂ ಅನೇಕ ಸ್ನೇಹಿತರು ಮಾತನಾಡುವವರು ಇದ್ದಾರೆಂದು ಕಾಣುತ್ತದೆ. ಅವರ ಜೀವನ ಅವರ ಬದುಕು, ಈ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಅವರು ಏನು ಬಿಟ್ಟು ಹೋಗಿದ್ದಾರೆ ಆ ಮಾರ್ಗದರ್ಶನ ಅವುಗಳನ್ನೆಲ್ಲಾ ಉಳಿಸಿಕೊಳ್ಳಲಿಕ್ಕೆ ಪ್ರಯತ್ನವನ್ನು ಮಾಡೋಣ. ಅವರ ಕುಟುಂಬಕ್ಕೆ, ಅವರ ಸ್ನೇಹಿತರಿಗೆ, ಅವರ ಪಕ್ಷಕ್ಕೆ, ಈಗಲೂ ಕೂಡ ಕೊನೆಯ ಗಳಿಗೆಯಲ್ಲಿ ಅವರ ಪಕ್ಷದಲ್ಲಿ ಯಾವುದೋ ಕೆಲವು ವ್ಯತ್ಯಾಸಗಳು ಭಿನ್ನಾಭಿಪ್ರಾಯಗಳು ಬರುತ್ತದೆಂದು ಗೊತ್ತಾದಾಗ ಅವರು ಕೊನೆಯ ಮೀಟಿಂಗ್‌ಗೆ ಬಹುಶಃ ಅವರ ಸ್ನೇಹಿತರಿಗೂ ಗೊತ್ತಿದೆ ಎಂದು ಕಾಣುತ್ತದೆ. ಕೊನೆಯ ಮೀಟಿಂಗ್‌ಗೆ ಅವರು ಬಂದು ಕುಳಿತುಕೊಂಡಂಥ ಸಂದರ್ಭದಲ್ಲಿ–ಅವರು 'ಏನು ಇಷ್ಟು ದಿನ ಮೂಲವಾದ ಒಂದು ವಿಚಾರವನ್ನು ಇಟ್ಟುಕೊಂಡಿದ್ದರು ಅದು ಬಹುಶಃ ಆ ಕೊನೆಯ ಮೀಟಿಂಗ್‌ನಲ್ಲಿ ಬದಲಾವಣೆ ಆಗಿತ್ತು ಎಂಬುದನ್ನು ಬಹುಶಃ ಶ್ರೀ ಮಲ್ಲಿಕಾರ್ಜುನರವರು ಒಪ್ಪಿಕೊಳ್ಳುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಏಕೆಂದರೆ ವಿಶಾಲವಾದ ಒಂದು ಭಾವನೆಯನ್ನು ಈ ರಾಜ್ಯದ ಉತ್ತಮವಾದ ಭವಿಷ್ಯಕ್ಕೆ ಒಂದು ತೀರ್ಮಾನವನ್ನು ತೆಗೆದುಕೊಳ್ಳಲಿಕ್ಕೆ ಮುಂದೆ ಬಂದಿದ್ದಂಥ

ಒಂದು ವಿಚಾರವನ್ನು ನನಗೆ ಫೋನಿನಲ್ಲಿ ತಿಳಿದಂಥ ಸಂದರ್ಭ ಉಂಟು, ಅಂದರೆ ಪರಿಸ್ಥಿತಿಗೆ ಅನುಸರಿಸಿಕೊಂಡು ಭವಿಷ್ಯದಲ್ಲಿ ಒಳ್ಳೆಯದಾಗುತ್ತದೆಂದು ಅನಿಸಿದರೆ ತ್ಯಾಗವನ್ನು ಮಾಡುವಂಥ ಪರಿಸ್ಥಿತಿಗೆ ಬಂದಿದ್ದರು, ಇಂಥ ವಿಶಾಲ ಮನೋಭಾವನೆಯವರಾಗಿದ್ದರು, ಅಂಥ ಒಂದು ವಿಚಾರವನ್ನು ಇಟ್ಟುಕೊಂಡಂಥ ವ್ಯಕ್ತಿಯ ಆದರ್ಶ ಜೀವನಕ್ಕೆ ಭಗವಂತ ಒಳ್ಳೆಯದು ಮಾಡಲಿ ಎಂದು ಪ್ರಾರ್ಥಿಸಿಕೊಂಡು, ನಾವು ಇವತ್ತು ಇಷ್ಟೆಲ್ಲಾ ಗುಣಗಾನ ಮಾಡುತ್ತಿದ್ದೇವೆ, ಹಾಗೆಯೇ ಅವರ ಲಕ್ಷಾಂತರ ಶಿಷ್ಯಕೋಟಿಗಳು ಸಾವಿರಾರು ಸ್ನೇಹಿತರು+ ಏನಿದ್ದಾರೆ ಬಹುಶಃ ಇವತ್ತು ನಾವೆಲ್ಲಾ ಅವರನ್ನು ಏಕೆ ನೆನಪಿಸಿಕೊಳ್ಳುತ್ತೇವೆಂದರೆ, ಅವರು ಮಾಡಿದಂಥ ಸತ್ಯ, ನೀತಿ ಮತ್ತು ಶಾಶ್ವತವಾದಂಥ ಬದುಕಿನಲ್ಲಿ ನಾವೆಲ್ಲಾ ನೋಡಿಕೊಂಡು ಇವತ್ತು ಅವರ ಜೀವನದ ಪ್ರತೀ ಹಂತದಲ್ಲಿ ಕೂಡ ಬಹುಶ: ಅನೇಕ ಅವರ ಭಾಷಣಗಳಿಂದ ನಾವು ತಿಳಿದುಕೊಳ್ಳುವಂಥದ್ದು ಬಹಳ ಇದೆ. ಅದನ್ನೆಲ್ಲಾ ನಾವೆಲ್ಲಾ ಕಾಪಾಡಿಕೊಂಡು ಹೋಗೋಣ ಎಂದು ಹೇಳಿ ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ದಿವಂಗತರಾದ ಸಿ.ಭೈರೇಗೌಡರವರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರಟಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು).

ಅಧ್ಯಕ್ಷರು: ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು. ಈಗ ಸದನವನ್ನು ನಾಳೆ ಬೆಳಿಗ್ಗೆ 10-00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಸದನವು ಬೆಳಿಗ್ಗೆ 11 ಗಂಟೆ 33 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ:30ನೇ ಜುಲೈ 2003ರ ಬುಧವಾರದಂದು ಬೆಳಿಗ್ಗೆ 10-00 ಗಂಟೆಗೆ ಸೇರಲು ನಿಶ್ಚಯಿಸಿತು).

(+ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತಾದೆ)

ಮುದ್ರಕರು:- ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು,
ಸಶಾಮು. ತುಮಕೂರು. ಕಾಸೂ. 01 - 350 ಪುಸ್ತಕಗಳು ದಿ: 06-04-2004.